


ವಿಳಾಸ: ನೂಪುರ ಭ್ರಮರಿ,‘ಸಾನ್ನಿಧ್ಯ’ಪ್ರಕಾಶನ, ದೇಚೂರು ರಸ್ತೆ, ಅಶ್ವತ್ಥಕಟ್ಟೆ ಸಮೀಪ,
ಮಡಿಕೇರಿಕೊಡಗು– ೫೭೧೨೦೧, ಫೋನ್ ನಂ: 9964140927,9880592986
ವೆಬ್‌ಸೈಟ್ : www.noopurabhramari.com
ಇ–ಮೈಲ್ ವಿಳಾಸ: feedback@noopurabhramari.com




## ಆತ್ಮೀಯ........................................



**ನೂ**ಪುರ ಭ್ರಮರಿಯನ್ನು ವರುಷದಿಂದಲೂ ತಾವೆಲ್ಲರೂ ಅವಲೋಕನ ಮಾಡುತ್ತಿದ್ದೀರಿ. ಆಶೀರ್ವದಿಸುತ್ತಿದ್ದೀರಿ. ಪ್ರತೀ ಸಂಚಿಕೆಯ ಯಶಸ್ಸಿನ ಹಿಂದೆಯೂ ತಮ್ಮ ಹರಕೆ ಹಾರೈಕೆಗಳಿವೆ ಎಂಬುದು ನಮ್ಮ ಸಂತೋಷ. ತಮ್ಮೆಲ್ಲರ ಪ್ರೋತ್ಸಾಹ, ಸಹಕಾರ ನಮಗೆ ನಿರಂತರ ಬೇಕು.

ಒಂದು ಪತ್ರಿಕೆಯನ್ನು ರೂಪಿಸುವುದರ ಹಿಂದಿನ ಕಷ್ಟಗಳು ನಿಮಗೆ ಗೊತ್ತಿದೆ. ಅದರಲ್ಲೂ ಪ್ರಕಟಿತ ಪತ್ರಿಕೆಯು ಒಮ್ಮೊಮ್ಮೆ ಆಸಕ್ತ ಓದುಗರನ್ನು ಮುಟ್ಟುವಲ್ಲಿ ಅಡಚಣೆಗಳು ಉಂಟಾಗುತ್ತಿವೆ. ಎಷ್ಟೋ ಬಾರಿ ವಿಳಾಸ ಅದಲು ಬದಲಾಗುವುದೋ ಅಥವಾ, ಬದಲಾಗುವುದೋ, ಅಥವಾ ಅಂಚೆದೋಷಗಳಿಂದಾಗಿ ಸಂಚಿಕೆಗಳು ತಲುಪುವಲ್ಲಿ ವಿಳಂಬವಾಗುತ್ತಿದೆ, ಕ್ಲಪ್ತ ಸಮಯಕ್ಕೆ ತಲುಪುತ್ತಿಲ್ಲ. ಹಲವು ಬಾರಿ ತಲುಪದ ಸಂದರ್ಭಗಳೂ ಇವೆ ಎಂದು ಆಸಕ್ತ ಓದುಗರು ತಿಳಿಸಿದ್ದಿದೆ. ಮಾತ್ರವಲ್ಲ, ಕೆಲವು ಓದುಗರು ಪತ್ರಿಕೆಯನ್ನು ತರಿಸಿಕೊಳ್ಳುವ ನಿಟ್ಟಿನಲ್ಲೂ ನೂಪುರ ಭ್ರಮರಿಯ ಬಳಗಕ್ಕೆ ಸ್ಪಷ್ಟ ಮಾಹಿತಿಗಳು ಲಭ್ಯವಾಗುತ್ತಿಲ್ಲ. ಈ ಹಿನ್ನಲೆಯಲ್ಲಿ ತಮ್ಮಲ್ಲೊಂದು ವಿನಂತಿ.

ಕೊನೆಯ ಪುಟದಲ್ಲಿ ಲಭ್ಯವಿರುವ ಬಾಕ್ಸ್‌ನ್ನು ಕತ್ತರಿಸಿ ನಿಮ್ಮ ಹೆಸರು, ವಿಳಾಸ, ಅಭಿಪ್ರಾಯಗಳೊಂದಿಗೆ ನಮಗೆ ಬರೆಯಿರಿ. ಇದು ನಮ್ಮ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸುತ್ತದೆ, ಸ್ಫೂರ್ತಿ ನೀಡುತ್ತದೆ. ತಮ್ಮ ಅಭಿಪ್ರಾಯಗಳನ್ನು ಈ-ಮೈಲ್ ಮೂಲಕವೂ ನಮಗೆ ತಿಳಿಸಬಹುದು. ಪತ್ರಿಕೆ ತಲುಪುತ್ತಿರುವ ಮತ್ತು ಅದರ ವಿಷಯಗಳ ಕುರಿತು ಆಗಾಗ ನಿಮ್ಮಿಂದ ಅನಿಸಿಕೆಗಳನ್ನು ನಾವು ಪ್ರೀತಿಯಿಂದ ಎದುರು ನೋಡುತ್ತಿರುತ್ತೇವೆ.

ಅಷ್ಟೇ ಅಲ್ಲ, ಸಂಗೀತ-ನೃತ್ಯ-ಲಲಿತಕಲೆಗಳಿಗೆ ಸಂಬಂಧಿಸಿದಂತೆ ನಿಮ್ಮ ಚಿಂತನೆಗಳನ್ನು, ಲೇಖನಗಳನ್ನು ಭ್ರಮರಿಯ ವಿವಿಧ ವಿಭಾಗಕ್ಕೆ ಕಳುಹಿಸಿ ಈ ಜ್ಞಾನಯಜ್ಞಕ್ಕೆ ಕೈಜೋಡಿಸಬಹುದು. ಇದಕ್ಕೆ ಹಿರಿ-ಕಿರಿಯರ ಭೇಧವಿಲ್ಲ. ಗುರು-ಕಲಾವಿದ-ವೀಕ್ಷಕ-ಪ್ರೇಕ್ಷಕ-ಪೋಷಕ-ವಿದ್ಯಾರ್ಥಿ..ಹೀಗೆ ಆಸಕ್ತರು ನೃತ್ಯಕ್ಕೆ ಸಂಬಂಧಿಸಿದಂತೆ ತಮಗನಿಸಿದ ಎಲ್ಲ ಅನಿಸಿಕೆ, ಅಭಿಪ್ರಾಯಗಳನ್ನು ಕಳಿಸಬಹುದು.

ಅಂದಹಾಗೆ ಆಸಕ್ತ ಓದುಗರು ಬಹಳಷ್ಟು ಮಂದಿ ಚಂದಾವಿವರಗಳನ್ನು ಕೇಳಿದ್ದಾರೆ. ನಿಮಗೆಲ್ಲರಿಗೂ ಗೊತ್ತಿರುವಂತೆ ನೂಪುರ ಭ್ರಮರಿಯ ಉದ್ದೇಶ ಲಾಭ ಲೆಕ್ಕಾಚಾರವಲ್ಲ. ಕಲೆಯ ಮೇಲಿನ ಆಸಕ್ತಿಯಿಂದ ಹುಟ್ಟಿಕೊಂಡ ಪುಟ್ಟ ಪ್ರಯತ್ನವಿದು. ಹಾಗಾಗಿ ಓದುಗಬಂದುಗಳು ಪತ್ರಿಕೆಯ ಮೌಲ್ಯವನ್ನು ಅರಿತು ತಮಗನಿಸಿದ ಮೊತ್ತವನ್ನು ಕಳುಹಿಸುತ್ತಿದ್ದಾರೆ, ಜೊತೆಗೆ ಸಂಚಿಕೆಯ ಪ್ರಾಯೋಜಕತ್ವವನ್ನು ವಹಿಸಿಕೊಳ್ಳುತ್ತಿದ್ದಾರೆ. ಅವರೆಲ್ಲರಿಗೂ ವಂದನೆಗಳು, ಕೃತಜ್ಞತೆಗಳು. **(..ಕೊನೆಯ ಪುಟಕ್ಕೆ)**





**ಪ್ರಿಯರೇ,**

# ಮಂಜೀರ

**ಅ**ದು ಪಾಶ್ಚಾತ್ಯರ ಪ್ರಸಿದ್ಧ ಬ್ಯಾಲೆ ಕಾರ್ಯಕ್ರಮ..'ರೋಮಿಯೋ ಅಂಡ್ ಜೂಲಿಯೆಟ್'... ಜೂಲಿಯೇಟ್ ಪಾತ್ರದ ವಯಸ್ಸು ೧೪.. ಆದರೆ ಪಾತ್ರ ನಿರ್ವಹಿಸುತ್ತಿದ್ದ ಕಲಾವಿದೆಯ ವಯಸ್ಸು ೪೫ !

ಇದೇಕೆ ಹೀಗೆ..? ತಾರುಣ್ಯದ ಹೊಸಿಲಲ್ಲಿ ನಿಂತ ಬಾಲೆಯ ಪಾತ್ರ ಮಧ್ಯ ವಯಸ್ಸಿನ ಮಹಿಳೆ ಮಾಡುವುದೇ..? ಕಾರಣವಿದೆ...

ಯಾವುದೇ ಕಲೆ ಕರಗತವಾಗಬೇಕಾದರೆ ಮೈ, ಮನಸ್ಸು ವಿಕಾಸವಾಗಬೇಕು. ಲೋಕ ವ್ಯವಹಾರ, ತಿಳಿವಳಿಕೆ, ಜೀವನಾನುಭವದ ವೈವಿಧ್ಯ ಅನುಭವಗಳು ಮೇಳವಿಸಬೇಕು. ಪಾಶ್ಚಾತ್ಯರಲ್ಲಿ ಸಾಮಾನ್ಯವಾಗಿ ಬಾಲ ಕಲಾವಿದರನ್ನು ರಂಗಸ್ಥಳಕ್ಕೆ ತರುವುದು ಕಡಿಮೆ. ಬ್ಯಾಲೆಯ ಪಾಠಗಳು ಚಿಕ್ಕಮಕ್ಕಳಿರುವಾಗಲೇ ಆರಂಭವಾದರೂ ಕಠಿಣ ಶ್ರಮ-ಶಿಸ್ತಿನಿಂದ ಏಳೆಂಟು ವರ್ಷಗಳ ಕಾಲ ದೇಹ ದುಡಿಸಬೇಕು; ಮನಸು ಬಯಸಿದಂತೆ ದೇಹ ಬಳುಕಬೇಕು.

ಇಂತಹ ತರಬೇತಿಗಳೆಲ್ಲಾ ಮುಗಿದ ಮೇಲೆ ಮೊದಲು ಯಾವುದಾದರೂ ಬ್ಯಾಲೆಯಲ್ಲಿ ಚಿಕ್ಕ ಪಾತ್ರ ಸಿಗುವ ಅವಕಾಶಕ್ಕೆ ಕಾಯಬೇಕು. ಅದಕ್ಕೆ ಮೊದಲು ಬ್ಯಾಲೆಗಳಲ್ಲಿ ನಾಯಕಿಯಿರಲಿ, ರಂಗಕ್ಕೆ ಬರುವುದೂ ಸುಲಭಸಾಧ್ಯವಿಲ್ಲ. ಆದ್ದರಿಂದಲೇ ೧೪ ವರ್ಷದ ಜೂಲಿಯೆಟ್ ಪಾತ್ರದ ಪ್ರೇಮವನ್ನು ಪರಿಣಾಮಕಾರಿಯಾಗಿ ಪ್ರೇಕ್ಷಕರಿಗೆ ಮುಟ್ಟಿಸಲು ಮಧ್ಯ ವಯಸ್ಸಿನ ಅನುಭವಸ್ಥ ಕಲಾವಿದೆಗೆ ಮಾತ್ರವೇ ಸಾಧ್ಯ ಎನ್ನುವುದು ಅವರ ಅಭಿಪ್ರಾಯ. ಮೊದಲು ಪರಿಪೂರ್ಣತೆ.. ನಂತರ ಪ್ರಸಿದ್ಧಿ...

ಆದರೆ ಸಾಮಾನ್ಯವಾಗಿ ಭರತನಾಟ್ಯವನ್ನೂ ಒಳಗೊಂಡಂತೆ ಭಾರತೀಯ ನೃತ್ಯ ಪ್ರಕಾರಗಳಲ್ಲಿ ಆಗುತ್ತಿರುವ ಬೆಳವಣಿಗೆಯನ್ನು ಗಮನಿಸಿ. ಬುದ್ಧಿ-ಭಾವ ತಿಳಿಯದ ವಯಸ್ಸಿಗೆ ರಂಗದ ಆಕರ್ಷಣೆ, ಅದಕ್ಕೆ ತಕ್ಕಂತೆ ಗುರು-ಪೋಷಕರ ಪ್ರೋತ್ಸಾಹ, child prodigy ಎನಿಸಿಕೊಳ್ಳುವ ಹಂಬಲ. ಎಸ್‌ಎಸ್‌ಎಲ್‌ಸಿ – ಪಿಯುಸಿ ವರೆಗೋ ಕಲಿತು ನಂತರ ಬೇರೆ-ಬೇರೆ ನೆಪವೊಡ್ಡಿ ತಿಲಾಂಜಲಿ ಬಿಡುವ ಹವ್ಯಾಸಿ ವಿದ್ಯಾರ್ಥಿಗಳು; ವಿದ್ವತ್ ಪರೀಕ್ಷೆ ಉತ್ತೀರ್ಣರಾದ ಮಾತ್ರಕ್ಕೆ ಕಲಿಯುವ, ಅರಿಯುವ ಅಭ್ಯಾಸ ಕೈಬಿಡುವ ಭೂಪರು; ಹತ್ತು ಹದಿನೈದು ವರ್ಷ ಕಲಿತೆವೆಂದು ಹೆಮ್ಮೆಯಿಂದ ಹೇಳುತ್ತಲೇ ಎಲ್ಲೋ ಕಳೆದು ಹೋಗುವವರು!

ಒಟ್ಟಿನಲ್ಲಿ ಆಡಂಬರ, ಹಣ ಮಾಡಿಕೊಳ್ಳುವ ಹುಚ್ಚು; ಹೆಸರು, ಮನ್ನಣೆ ಗಳಿಸಿಕೊಳ್ಳುವ ಕೆಚ್ಚು; ಪ್ರತಿಷ್ಟಿತ ಎಂಬ ಹೆಸರಲ್ಲಿ ಕಲೆಯನ್ನೇ ಮಾರುವುದು ಅಚ್ಚುಮೆಚ್ಚು. ದೈವೀಕ ಎನ್ನುತ್ತಲೇ ಕಲೆಯನ್ನು ಕೈಗೊಂಬೆಯೆಂದು ಪರಿಗಣಿಸುವ ಪ್ರಭೃತಿಗಳ ಸಂಖ್ಯೆ ಇಲ್ಲಿ ಹೆಚ್ಚೇ ಹೆಚ್ಚು!

***ಖಾಸಗಿ ಪ್ರಸಾರದ ದ್ವೈಮಾಸಿಕ, ಸಂಪಾದಕಿ : ಮನೋರಮಾ ಬಿ. ಎನ್***

ಆಂತರಂಗಿಕ ಕಲೆಯನ್ನು ತಿಳಿದುಕೊಳ್ಳುವ ಪ್ರಯತ್ನ ಒತ್ತಟ್ಟಿಗಿರಲಿ, ಸೌಜನ್ಯಪೂರ್ವಕ ನಡವಳಿಕೆಗೂ ಕೊನೆಗೆ ಕತ್ತರಿ ! ದೇಹ ಸೌಂದರ್ಯವೇ ಕಲೆಯ ಅವಿಭಾಜ್ಯ ಅಂಗವೆನ್ನುವ ಅನಿವಾರ್ಯತೆ. ಒಂದು ವೇಳೆ ನೃತ್ಯಕ್ಷೇತ್ರದಲ್ಲಿ ಮುಂದುವರಿದರೂ ಅಲ್ಲಿ ಕಾಸಿದ್ದವರಿಗೆ ಮನ್ನಣೆ, ಸರ್ಟಿಫಿಕೇಟುಗಳೇ ಯಶಸ್ಸಿನ ಕೊನೆ, ಪ್ರದರ್ಶನ–ಪರೀಕ್ಷೆ–ಪ್ರವೇಶಗಳೇ ವಿದ್ವತ್ತು–ಸಾಧನೆ, ಕೊನೆಗೆ ಕಲೆಯ ಬಗೆಗೆ ಕನಸು ಕಂಡವರ, ಕಟ್ಟಿದವರ ಅವಗಣನೆ !

ಹಾಗಾದರೆ, ನೃತ್ಯ ಕಲಿಕೆ ಸಮಯ ಕಳೆಯಲೋ?ಬೊಜ್ಜು ಕರಗಲೋ?ಪ್ರತಿಷ್ಠೆಗೋ? ಲಾಭಕ್ಕೋ? ಹೊಟ್ಟೆಪಾಡಿಗೋ ಅಥವಾ ಕಲೆಯ ಮೇಲಿನ ಆಸಕ್ತಿಗೋ?

ಪಾಶ್ಚಾತ್ಯ ನೃತ್ಯ ಕಲಾವಿದರ ಬಗೆಗೆ ಅಲ್ಲಿನ ಜನತೆಗೆ ಭಕ್ತಿ, ವಿಶ್ವಾಸ, ಸಮಾಜದಲ್ಲಿ ಕಲಾವಿದರಿಗಿರುವ ಅಗ್ರಸ್ಥಾನ, ಉತ್ತೇಜನ, ಅಸಾಮಾನ್ಯ ಪ್ರೋತ್ಸಾಹ., ಹೀಗೆ, ಕಲಾವಿದರನ್ನು ದೇವಾಂಶ ಸಂಭೂತರೆಂಬಂತೆ ಪೂಜಿಸುವ ಕಲಾಭಕ್ತರು! ಜೊತೆಗೆ ಸಂಗೀತ–ನೃತ್ಯಾದಿ ಕಲೆಗಳ ಮಟ್ಟಿಗೆ ನಮ್ಮವರಿಗಿಂತ ಅವರು ಸ್ವಲ್ಪ ಮಟ್ಟಿಗೆ flexible ಕೂಡಾ. ಕಲೆಗೆ ಅನುಗುಣವಾದ ಸಾತ್ವಿಕವೋ, ಆಂಗಿಕವೋ ಆದ ಅವಶ್ಯಕತೆಗಳನ್ನು ಪೂರ್ಣಗೊಳಿಸುವಲ್ಲಿ ಹಿರಿ–ಕಿರಿಯರೆನ್ನದೆ ಕಂದಾಚಾರ ಬದಿಗಿಟ್ಟು ಅವರು ಪರಿಪಾಲಿಸುವ ಶಿಸ್ತು ಸ್ತುತ್ಯಾರ್ಹ.

ಹಾಗಂದ ಮಾತ್ರಕ್ಕೆ, ಪಾಶ್ಚಾತ್ಯ ಕಲೆಗಳೆಲ್ಲ ನಮ್ಮವಕ್ಕಿಂತ ಉತ್ಕೃಷ್ಟ ಎಂಬ mindset ನಮ್ಮದಲ್ಲ. ಪ್ರತಿಯೊಂದು ಸಂಸ್ಕೃತಿಗಳಿಗೂ ಅದರದ್ದೇ ಆದ ವೈಶಿಷ್ಟ್ಯ, ಭೇಧ, ಅನುಕೂಲಗಳಿವೆ. ಅಲ್ಲೂ ಸಾಕಷ್ಟು ಭಿನ್ನತೆ, ತಾರತಮ್ಯ, ರಾಜಕೀಯಗಳಿವೆ. ಹಾಗೆ ನೋಡಿದರೆ, ನಮ್ಮಲ್ಲೂ 'ಕಲಾಸೇವೆ'ಯೆಂದು ಬರೀ ಬಾಯಿಯಲ್ಲಿ ಆಡಿ ಆನಂದಿಸದೆ ಮನಃಸ್ಫೂರ್ತಿಯಿಂದ ದುಡಿದವರಿದ್ದಾರೆ. ಇಂತಹ ಅಪೂರ್ವ ಪ್ರಯತ್ನಗಳಿಂದಲೇ ಪಾಶ್ಚಾತ್ಯರೂ ಭಾರತೀಯ ಲಲಿತಕಲೆಗಳ ಬಗ್ಗೆ ಪ್ರೀತಿ, ಗೌರವ ಹೊಂದಿದವರಾಗಿದ್ದಾರೆ.

ಆದರೆ ವರ್ಷವರ್ಷಕ್ಕೂ ನಮ್ಮಲ್ಲಿ ಸಾವಿರಾರು ನೃತ್ಯ ಕಲಾವಿದರು ತಯಾರಾಗುತ್ತಲೇ ಇದ್ದರೂ, ಪ್ರತಿಯೊಂದು ಕಲಾಪ್ರಕಾರಕ್ಕೂ ಸಾವಿರಾರು ಗುರುಗಳು ಸಂಸ್ಥೆಗಳಿದ್ದರೂ, ಕಲಾವಿದರಿಗೆ ಕಲೆಯ ಬಗೆಗೆ ಮತ್ತು ಪ್ರೇಕ್ಷಕರಿಗೆ ಕಲಾವಿದರ ಬಗೆಗೆ ಯಾಕೆ ಭಕ್ತಿ, ಪ್ರೀತಿ ವಿರಳವಾಗುತ್ತಿದೆ ? ಸಿನಿಮಾ ಒಂದನ್ನು ಹೊರತುಪಡಿಸಿದರೆ ಭಾರತೀಯ ನೃತ್ಯ ಕಲಾವಿದರು ಯಾಕೆ ಆರಾಧನಾ ಮನೋಭಾವ ಹುಟ್ಟುಹಾಕುವಲ್ಲಿ ಸೋಲುತ್ತಿದ್ದಾರೆ?

ಮೊನ್ನೆ ಮೊನ್ನೆ ಬಡ ಪೋಷಕರೊಬ್ಬರು ಹೇಳಿದ ಮಾತು ನೆನಪಾಗುತ್ತದೆ. 'ಡ್ಯಾನ್ಸ್ ಎಲ್ಲಾ ನಮ್ಮಂತವರಿಗಲ್ಲ. ಕಲಿಯೋದಕ್ಕೂ, ಕಲಿತುಕೊಂಡು ಮುಂದುವರಿಸಲಿಕ್ಕೂ ಕೈಯ್ಯಲ್ಲಿ ಕಾಸು ಬೇಕು, ಪ್ರತಿಭೆಯಲ್ಲ, ಕಲೆಯ ಕುರಿತಾದ ಕನವರಿಕೆಗಳಲ್ಲ!' ಯೋಚಿಸಬೇಕಲ್ಲವೇ?

ಪ್ರೀತಿಯಿಂದ ನಿಮ್ಮ

**ಸಂಪಾದಕರು**

**manorama@noopurabhramari.com**





# ಶ್ಲೋಕ

**– ವೈಷ್ಣವಿ .ಎನ್**

*'ನಾವ್ ಸಣ್ಣ ಮಕ್ಳಾಗಿದ್ದಾಗ ಬೆಳಿಗ್ಗೆ ಅಥ್ವಾ ಸಂಜೆ ದೇವರ ಪೀಠದ ಹತ್ರ ಕೂರಿಸಿ, ತುಪ್ಪದ ದೀಪ ಹಚ್ಚಿ ಅಪ್ಪನೋ, ಅಮ್ಮನೋ, ಅಥವಾ ಅಜ್ಜ ಅಜ್ಜಿಯೋ ಭಜನೆ, ಸ್ತೋತ್ರ, ಶ್ಲೋಕ, ಋತು–ಮಾಸ–ಸಂವತ್ಸರ–ನಕ್ಷತ್ರಗಳನ್ನು ಹೇಳಿಸಿ ಭಗವನ್ನಾಮ ಸ್ಮರಣೆ ಮಾಡ್ಸೋದು ರೂಢಿ. ಇವೆಲ್ಲಾ ಎಷ್ಟು ನೆನಪಲ್ಲಿದೆ ಅಂದ್ರೆ, ಮುಂದೆ ಶಾಲೆ–ಕಾಲೇಜಿನಲ್ಲಿ ಎಷ್ಟೋ ಪಾಠಗಳನ್ನು ಕಲಿತು ಮರೆತರೂ ಇವು ಮಾತ್ರ ಇಂದಿಗೂ ನೆನಪಲ್ಲುಳ್ದಿದೆ. ಆದ್ರೆ ಇಂದಿನ ಮಕ್ಳಿಗೆ ಈ ಸಂಸ್ಕಾರ ಎಲ್ಲಿದೆ? ಟೈಮ್ ಎಲ್ಲಿದೆ? ಮನೆಗೆ ಸರಿಯಾಗಿ ಬಂದ್ರೆ ಸಾಕು ಅನ್ನೋ ಹಾಗಾಗಿದೆ. ಸಂಜೆಯಾದ್ರೆ ಸಾಕು, ಮಕ್ಳದ್ದು ಹೋಂವರ್ಕ್ ಪರದಾಟ, ಇಲ್ದಿದ್ರೆ ಟಿ.ವಿ, ಧಾರಾವಾಹಿ, ಸಿನಿಮಾಗಳ ಹೋರಾಟ; ಇಲ್ದಿದ್ರೆ ಶಾಪಿಂಗ್, ಚಾಟಿಂಗ್, ಈಟಿಂಗ್ ! ಅಷ್ಟಕ್ಕೂ ಒಳ್ಳೆಯ ಸಂಸ್ಕಾರ ಕಲಿಸಿಕೊಡಬೇಕಾದ ಅವ್ರವ್ರ ಅಪ್ಪ ಅಮ್ಮಂದಿರಾದ್ರೂ ಸಂಜೆ ಹೊತ್ತಿಗೆ ಮನೆಯಲ್ಲಿ ಎಲ್ಲಿರ್ತಾರೆ?'* – ಎಂದು ನಮ್ಮ ಹಿರಿಯರು ತಮ್ಮ ಗತವೈಭವವನ್ನು ನೆನಪಿಸಿಕೊಳ್ಳುತ್ತ, ಮತ್ತೊಮ್ಮೆ ಈಗಿನ ಬದಲಾದ ಕಾಲಗುಣವನ್ನು ಹಳಿಯುತ್ತ ಗುಣುಗುಣಿಸುವುದನ್ನು ಆಗೊಮ್ಮೆ ಈಗೊಮ್ಮೆ ಕೇಳಿರಬಹುದು. ಅವರ ಹಪಹಪಿಕೆಯಲ್ಲೂ ಅರ್ಥವಿದೆ ಅನ್ನಿಸೋದಿಲ್ವಾ?

ನಿರ್ದಿಷ್ಟ ಛಂದೋಬಂಧವುಳ್ಳ ಒಂದು ಸಂಸ್ಕೃತ ವೃತ್ತವೇ ಶ್ಲೋಕ. ವಾಲ್ಮೀಕಿ ಮಹರ್ಷಿಯು ಶೋಕದಿಂದ ದಂಪತಿ ಕ್ರೌಂಚ ಪಕ್ಷಿಗಳನ್ನು ಕೊಂದ ಬೇಡನೆಡೆಗೆ ನುಡಿದ ಶಾಪವೇ ಶ್ಲೋಕದ ಉಗಮಕ್ಕೆ ಕಾರಣ ಎನ್ನಲಾಗಿದೆ. ಭಾವಕ್ಕೆ ತಕ್ಕಂತೆ ರಾಗ ಹೊಂದಿಸಿ ಹಾಡುವುದು ಶ್ಲೋಕದ ಪರಿಪಾಠ. ಇದರಲ್ಲಿ ತಾಳವಿರುವುದಿಲ್ಲ. ಸಂಸ್ಕೃತ ಭಾಷೆಯ ಮೇಲಿನ ಆದಾರಾಭಿಮಾನ, ಪ್ರೋತ್ಸಾಹದಿಂದಾಗಿ ಹೆಚ್ಚಾಗಿ ಸಂಸ್ಕೃತ ಭಾಷೆಯಲ್ಲಿ ಶ್ಲೋಕಗಳು ರಚಿತವಾಗಿವೆ ಮತ್ತು ಇಂದಿಗೂ ತನ್ನ ವಿವಿಧ ಬಗೆಯ ಅಕ್ಷರ–ಅರ್ಥವ್ಯತ್ಯಾಸಗಳ ಬಹುಮುಖಿ ಕೋನದಿಂದಾಗಿ ಪೂಜನೀಯವೆನಿಸಿವೆ. ಶ್ಲೋಕದ ಸಾಹಿತ್ಯ ಸಾಮಾನ್ಯವಾಗಿ ದೇವತಾಸ್ತುತಿ, ಪಾರ್ಥನೆ, ವರ್ಣನೆ, ಲೀಲಾವೈಭವ..ಹೀಗೆ ಬಹುರೂಪಿ.

ಶ್ಲೋಕಗಳಲ್ಲಿ ಎರಡು ಅಥವಾ ನಾಲ್ಕು ಪಾದಗಳಿರುವುದು ರೂಢಿ. ಪ್ರತಿಯೊಂದು ಪಾದದಲ್ಲಿಯೂ ನಿಯಮಿತವಾದ ಅಂಶಗಣ ಅಥವಾ ಮಾತ್ರಾಗಣವಿರುತ್ತದೆ. ಇದರಿಂದ ಆಯಾಯ ಶ್ಲೋಕದ ಲಕ್ಷಣವು ಉಂಟಾಗುತ್ತದೆ. ನಾಲ್ಕು ಪಾದಗಳಿಗೂ ಒಂದೇ ರೀತಿಯ ಲಕ್ಷಣವಿದ್ದರೆ ಅದು ಸಮಪಾದ. ೧–೩, ೨–೪ ಪಾದಗಳು ಸಮನಾಗಿದ್ದರೆ ಅದು

ವಿಷಮಪಾದ ಶ್ಲೋಕವೆನಿಸಿಕೊಳ್ಳುತ್ತದೆ.

ನೃತ್ಯದಲ್ಲಿ ಶ್ಲೋಕವು ವಿವಿಧ ಭಾವಾಭಿವ್ಯಕ್ತಿ ಇರುವ, ಲಾಸ್ಯವೇ ಪ್ರಮುಖವಾಗಿರುವ ನೃತ್ಯಬಂಧ. ನಿತ್ಯಪಠಣ ಮಾಡುವ ಶ್ಲೋಕಗಳನ್ನು ಸಂಗೀತ – ನೃತ್ಯದಲ್ಲಿ ಬಳಸುತ್ತಾರಾದರೂ ಅವುಗಳ ಸಂಖ್ಯೆ ಕಡಿಮೆ. ಬದಲಾಗಿ ಸಾಂಪ್ರದಾಯಿಕವಾಗಿ ಬಳಕೆಯಾಗುತ್ತಲೇ ಬಂದಿರುವ ಶ್ಲೋಕಗಳೇ ನೃತ್ಯದಲ್ಲಿ ಜನಪ್ರಿಯ. ದೇವರ ಅಥವಾ ನಾಯಕನ ಗುಣ–ಮಹಿಮೆಯನ್ನು ತಿಳಿಯುವ, ರೂಪವನ್ನು ವರ್ಣಿಸುವ, ಪೂಜೆಯನ್ನು ನೆರವೇರಿಸುವ, ನಮ್ರ ಸೇವೆಯನ್ನು ಮಾಡುವ, ಆತ್ಮನಿವೇದನೆಯ, ವಾತ್ಸಲ್ಯ–ತನ್ಮಯತೆ–ಸಖ್ಯ–ಸ್ನೇಹಪರತೆ ಇತ್ಯಾದಿ ಭಕ್ತಿ, ಆಸಕ್ತಿ ಸಮ್ಮಿಲನ ರೂಪವನ್ನು ಶ್ಲೋಕದಲ್ಲಿ ಕಾಣುತ್ತೇವೆ.

ಕನ್ನಡದಲ್ಲಿ ಶ್ಲೋಕಗಳಿಗೆ ಸಮನಾಗಿ ದಾಸಶ್ರೇಷ್ಟರಿಂದ ರಚಿತವಾದ ಉಗಾಭೋಗಗಳನ್ನು ಹೆಸರಿಸಬಹುದು. ಉಗಾಭೋಗಗಳು ಪದ–ದೇವರನಾಮಗಳಿಗೆ ಪೂರ್ವಭಾವಿಯಾಗಿ ಬರುವ, ದೇವರನಾಮಗಳ ಸಾಹಿತ್ಯ ಉದ್ದೇಶವನ್ನು ಸೂಕ್ಷ್ಮವಾಗಿ ಸ್ಪಷ್ಟಪಡಿಸುವ ಸಾಹಿತ್ಯ ವಿಭಾಗ. ಕೆಲವೊಂದು ಬಾರಿ ಉಗಾಭೋಗಗಳನ್ನಷ್ಟೇ ಅಭಿನಯಿಸುವ ಪದ್ಧತಿಯೂ ಜನಪ್ರಿಯ. ಆದರೂ ಶ್ಲೋಕದಷ್ಟು ಅಭಿನಯ ವಿಸ್ತರಣವನ್ನು ಉಗಾಭೋಗಗಳು ನೀಡಲಾರವು ಎಂಬುದೊಂದು ಅನಿಸಿಕೆ.

# ನರ್ತನ ಸುರಭಿ

ಶ್ಲೋಕವನ್ನು ಪುಷ್ಪಾಂಜಲಿ, ದೇವರನಾಮ ಅಥವಾ ಕೀರ್ತನೆಗಳಿಗಿಂತ ಮುಂಚೆ ಅಥವಾ ಅವುಗಳಿಗೆ ಪೂರಕವಾಗಿ ಅಭಿನಯಿಸುವ ಪದ್ಧತಿ ಚಾಲ್ತಿಯಲ್ಲಿದೆ. ಆದರೆ ಸಾಂಪ್ರದಾಯಿಕವಾಗಿ ತಿಲ್ಲಾನದ ನಂತರ ಶಾಂತಿ, ಸಮಸ್ಥಿತಿಯನ್ನು ಕಂಡುಕೊಳ್ಳಲು ಅಥವಾ ಮಂಗಳದ ಮುಕ್ತಾಯ ಹಾಡಲು ಅಭಿನಯಿಸಲಾಗುತ್ತದೆ. ಮಧ್ಯಮಾವತಿ, ಶ್ರೀರಾಗ, ಸುರುಟಿ ಇಂತಹ ರಾಗಗಳನ್ನು ಮುಕ್ತಾಯದ ಸಮಯದಲ್ಲಿ ಬಳಸಿ ಮಂಗಳ ಹಾಡುವುದು ಕ್ರಮ. ಮೊದಮೊದಲಿಗೆ ಆರಭಿ ರಾಗವನ್ನು ಶ್ಲೋಕಗಳಿಗೆ ಬಳಸಲಾಗುತ್ತಿತ್ತಾದರೂ, ಇತ್ತೀಚೆಗೆ ರಾಗಮಾಲಿಕೆ ರಾಗಗಳಲ್ಲಿ ಹಾಡುವ ಕ್ರಮ ಬೆಳೆದುಬಂದಿದೆ.ವಿಳಂಬ ರೀತಿಯ ಹಾಡುಗಾರಿಕೆ ಇದಕ್ಕೆ ಒಪ್ಪುವಂತದ್ದು.

ಕೆಲವೊಂದು ವಿಮರ್ಶಕರು ದೇವತಾಸ್ತುತಿ ನೃತ್ಯ ಶ್ಲೋಕಾಭಿನಯಕ್ಕೆ ಸೂಕ್ತವಲ್ಲ ಎನ್ನುವುದಿದೆ. ಕಾರಣಗಳೂ ಆಯಾಯ ಸಂಪ್ರದಾಯ ಮತ್ತು ಅವರವರ ಮನೋಭಾವಕ್ಕೆ ಅನುಗುಣವಾಗಿ ಸಾಕಷ್ಟಿರುತ್ತವೆ. ಕೆಲವೊಮ್ಮೆ ಪರೀಕ್ಷೆಗಳ ದೃಷ್ಟಿಯಿಂದಲೇ ನೃತ್ಯಬಂಧಗಳ ಸ್ವರೂಪ ನಿರ್ಧಾರವಾಗುವುದಿದೆ ! ಆದರೆ ಇಂತಹ ಸಮಯದಲ್ಲಿ ಶ್ಲೋಕಗಳಲ್ಲಿ ಉತ್ಕೃಷ್ಟ ಮಟ್ಟದ ನಾಯಿಕಾ–ನಾಯಕಾ ಭಾವಗಳನ್ನು ಅಪೇಕ್ಷಿಸಲಾಗುತ್ತದೆ.





ಶ್ಲೋಕದಲ್ಲೂ ಶೃಂಗಾರಪೂರಿತವಾದುವು, ಭಕ್ತಿಪೂರಿತವಾದವು, ವರ್ಣನಾಪೂರಿತವಾದುವು ಎಂಬ ಮೂರು ವಿಧಗಳಿವೆ. ಶೃಂಗಾರ ಪ್ರಧಾನವಾದವುಗಳಲ್ಲಿ ನಾಯಕಾ–ನಾಯಿಕಾ ಭಾವ ಯಥೇಚ್ಛವಾಗಿದ್ದು; ವಿರಹತಾಪ, ಭಯ, ಶೋಕ, ಆನಂದ ಹೀಗೆ..ನಾನಾ ಭಾವಗಳೊಂದಿಗೆ ನರ್ತಕಿಯ ಜೀವಾತ್ಮವು ಪರಮಾತ್ಮನಲ್ಲಿ ಐಕ್ಯವಾಗುವುದೇ ಧ್ಯೇಯವಾಗಿರುತ್ತದೆ.

ಲೀಲಾಶುಕ ಕವಿಯ ಶ್ರೀಕೃಷ್ಣಕರ್ಣಾಮೃತ ಶ್ಲೋಕಗಳು ಬಹಳ ಜನಪ್ರಿಯ. ಈ ಶ್ಲೋಕಗಳಲ್ಲಿ ಶೃಂಗಾರ, ಭಕ್ತಿ, ವರ್ಣನೆ– ಎಲ್ಲವೂ ಇದೆ. ಗೀತಗೋವಿಂದ, ಅಮರುಶತಕ, ಸೌಂದರ್ಯಲಹರಿ, ಮುಕುಂದಮಾಲಾ ಸ್ತೋತ್ರ ಮುಂತಾದ ಕಾವ್ಯ, ಮುಕ್ತಕಗಳಿಂದಲೂ ಶ್ಲೋಕ ಹಾಡಲಾಗುತ್ತದೆ.

*ಶ್ಲೋಕ–ಚೂರ್ಣಿಕೆ–ಸ್ತೋತ್ರಗಳನ್ನು ಹೇಳುವ, ಹೇಳಿಸುವ ಪದ್ಧತಿ ಮಾಯವಾಗುತ್ತಿದೆ ! ಸದ್ಯದ ಮಟ್ಟಿಗೆ ಇಂತವು ಉಳಿದಿದ್ದರೆ ಶಾಸ್ತ್ರೀಯವೆನ್ನಿಸುವ ಕ್ಷೇತ್ರಗಳಲ್ಲಿ ಮಾತ್ರ. ಅಂದರೆ ಪೂಜೆ–ಪುನಸ್ಕಾರ–ಸತ್ಸಂಗ–ಸಂಗೀತ–ನೃತ್ಯ!*

ಶ್ಲೋಕಗಳ ಸಾಲುಗಳನ್ನು ಹಾಡುವಾಗ ಪುನರಾವರ್ತಿಸಿ ಹಾಡಲಾಗುತ್ತದೆ. ಇದರಿಂದ ರಾಗದ ಸುಂದರ ನಿರೂಪಣೆ ಸಾಧ್ಯ.. ಜೊತೆಗೆ ಸಾಹಿತ್ಯವನ್ನು, ಸಂಬಂಧಪಟ್ಟ ಭಾವಗಳನ್ನು ಅಭಿನಯದ ಮುಖಾಂತರ ಕಲಾವಿದರು ವಿವರವಾಗಿ ವಿಸ್ತರಿಸುತ್ತಾರೆ. ಆದ್ದರಿಂದ ಇಂತಹ ಸಂಚಾರಿ ಭಾವಗಳಿಗೆ ಪ್ರಾಮುಖ್ಯತೆ ಹೆಚ್ಚು.

ದೇಹಕ್ಕೆ ಹೆಚ್ಚಿನ ಶ್ರಮ ಕೊಡದೇ ಅಭಿನಯವನ್ನೇ ಜೀವಾಳವಾಗಿರಿಸಿ ಕೈಯ್ಯ ಮುದ್ರೆ, ಅಂಗವಿನ್ಯಾಸ, ಭಂಗಿ, ಕಾಲ್ಚಲನೆ, ಮುಖಭಾವಗಳಿಂದ ಮಾಡುವ ನಿಂದಾಸ್ತುತಿಗಳ ಸುಂದರ ನೃತ್ಯಬಂಧವಿದು. ಹಾಗಾಗಿ ಅಭಿನಯಿಸುವ ಕಲಾವಿದನ ಪರಿಪೂರ್ಣತೆಯನ್ನು ಒರೆಗೆ ಹಚ್ಚುವುದಷ್ಟೇ ಅಲ್ಲದೆ, ಗಾಯಕನಲ್ಲಿರುವ ಪ್ರತಿಭೆಗೂ ಕನ್ನಡಿ ಹಿಡಿವ, ಕವಿಹೃದಯಗಳಿಗೆ ರಂಜನೆಯುಂಟುಮಾಡುವ ಸಾಹಿತ್ಯಪ್ರಕಾರ. ನುರಿತ ಕಲಾವಿದರಷ್ಟೇ ಭಾವಪೂರ್ಣರಾಗಿ ಶ್ಲೋಕಗಳನ್ನು ಅಭಿನಯಿಸಿಯಾರು.

# ಹಸ್ತ ಮಯೂರಿ



**ಲಕ್ಷಣ: *ಬೆರಳುಗಳನ್ನು ಒಟ್ಟುಗೂಡಿ ಮಡಿಸಿ ಅವುಗಳ ಮೇಲೆ ಹೆಬ್ಬೆರಳನ್ನು ಇರಿಸಿದಾಗ ಮುಷ್ಠಿ ಹಸ್ತ.***

## ಮುಷ್ಠಿಹಸ್ತ

ಶ್ರೀಮನ್ಮಹಾವಿಷ್ಣುವು ಮಧು ಕೈಟಭರೊಡನೆ ಹೋರಾಡುವಾಗ ಉಪಯೋಗಿಸಿದ ಹಸ್ತವೇ ಮುಷ್ಠಿಯೆನ್ನಲಾಗಿದೆ. ಇದರದ್ದು ನೀಲಿ ಬಣ್ಣ, ಶೂದ್ರವರ್ಣ, ಇಂದ್ರ ಋಷಿ, ಚಂದ್ರ ದೇವತೆ. ಒಡಿಸ್ಸಿ ನೃತ್ಯ ಪದ್ಧತಿಯಲ್ಲಿ ಇದನ್ನು ಬಿರೋಧಹಸ್ತವೆನ್ನುತ್ತಾರೆ.

***ಯೋಗ**ದಲ್ಲೂ ಈ ಹಸ್ತ ಬಹು ಪ್ರಚಲಿತ. ನಾಲ್ಕು ಬೆಟ್ಟುಗಳನ್ನು ಹೆಬ್ಬೆರಳಿನ ಬೆಟ್ಟಿನ ಬುಡಕ್ಕೆ ಹಿಡಿದು, ಹೆಬ್ಬೆಟ್ಟನ್ನು ಉಂಗುರಬೆರಳ ಕೆಳಗಂಟನ್ನು ಸ್ಪರ್ಶಿಸುವಂತಿರಬೇಕು. ಇದು ನಾಲ್ಕು ಮುದ್ರೆಗಳ ಸಮ್ಮಿಶ್ರ ಮುದ್ರೆಯೆನಿಸಿದ್ದು, ಶರೀರ ಜಡವಾದಾಗ, ಬಾವು ಬಂದಾಗ ದಿನಕ್ಕೆ 50 ನಿಮಿಷದಂತೆ ಮಾಡಬೇಕು. ಧೈರ್ಯ–ಉತ್ಸಾಹ ಕುಂದಿದಾಗ, ಚಳಿ ಉಂಟಾದಾಗ, ಹಸಿವು ಕ್ಷೀಣಿಸಿದಾಗ, ಬೊಜ್ಜು ಬೆಳೆದಾಗ, ಕಫ ಹೆಚ್ಚಾದಾಗ, ರೆಪ್ಪೆಗಳು ಅಂಟಿ ಕಣ್ತೆರೆಯುವಲ್ಲಿ ತೊಂದರೆಯಾದಾಗ ಈ ಮುದ್ರೆ ಮಾಡುವುದರಿಂದ ಉಪಯೋಗ ಹೊಂದಬಹುದು. ಗಾಯತ್ರೀ ಮುದ್ರೆಗಳಲ್ಲಿ ಒಂದೆನಿಸಿದ **‘ಮುಷ್ಠಿಕಂ ’** ಎಂಬ ಮತ್ತೊಂದು ಮುದ್ರೆಯು ಕ್ಯಾನ್ಸರ್ ನಿವಾರಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಎರಡೂ ಕೈಗಳಲ್ಲೂ ಮುಷ್ಠಿಯನ್ನು ಹಿಡಿದು ಒಂದಕ್ಕೊಂದು ಅಂಗೈ ಅಭಿಮುಖವಾಗಿ ಜೋಡಿಸಬೇಕು. ಹೆಬ್ಬೆರಳು ತೋರುಬೆರಳಿನ ಗಂಟನ್ನು ಸ್ಪರ್ಶಿಸುವಂತಿದ್ದರೆ ಮುಷ್ಠಿಕಂ ಮುದ್ರೆ ಏರ್ಪಡುತ್ತದೆ.*

*ಮುಷ್ಟಿಹಸ್ತವನ್ನು ಎರಡು ಕೈಗಳಲ್ಲೂ ಸಾಧಕನು ತನ್ನ ದೇಹದ ಕಡೆಗೆ ಹಿಡಿದರೆ **‘ಸಮ್ಮುಖೀಕರಣ’** ಮುದ್ರೆಯೆಂಬ ಯೋಗಮುದ್ರೆ ಸಂಭವಿಸುತ್ತದೆ. ಇದು ಪ್ರಾರ್ಥನೆ ಮತ್ತು ಭಕ್ತಿಯಲ್ಲಿ ಪರಿಣಾಮಕಾರಿ. ಅದೇರೀತಿ ಎಡಗೈ ಮುಷ್ಟಿ ಹಸ್ತದ ಮೇಲೆ ಬಲಗೈ ಮುಷ್ಟಿಯನ್ನು ತಲೆಯ ಮೇಲೆ ಹಿಡಿಯುವುದರಿಂದ **‘ಶಕ್ತಿದಾಯಿನಿ ’** ಮುದ್ರೆಯು ಏರ್ಪಡುತ್ತದೆ. ಇದು ದೈಹಿಕ ಚೈತನ್ಯಕ್ಕೆ ಸಹಕಾರಿ. ಮುಷ್ಟಿಹಸ್ತವನ್ನು ಕೆಳಮುಖವಾಗಿ ಹಿಡಿಯುವುದರಿಂದ **‘ಆದಿ’** ಮುದ್ರೆಯು ಉಂಟಾಗುತ್ತದೆ. ಈ ಮುದ್ರೆಯು ತಲೆಗೆ ಸಂಬಂಧಿಸಿದ ಕಾಯಿಲೆಗಳ ನಿವಾರಣೆಗೆ ಉಪಯುಕ್ತ.*

**ಅಭಿನಯ ದರ್ಪಣದ ಪ್ರಕಾರ ವಿನಿಯೋಗ:** ದೃಢವಾದ ಸ್ಥಿರಭಾವ, ಕೂದಲು





ಹಿಡಿದೆಳೆಯುವುದು, ದೃಢತ್ವ (ದಾರುಢ್ಯ) ಶಕ್ತಿ, ಪದಾರ್ಥ ಹಿಡಿದುಕೊಳ್ಳುವುದು, ಜಟ್ಟಿಗಳ ಕುಸ್ತಿ, ಎದೆಗಾರಿಕೆ, ವಸ್ತುಗಳನ್ನು ಎಳೆದು ಹಿಡಿಯುವಿಕೆ.

**ಇತರೆ ವಿನಿಯೋಗ:** ಪ್ರಹರ, ಯುದ್ಧ, ಕೈಯಿಂದ ಹಿಚುಕುವುದು, ಮರ್ದನ, ಗಾಢಾಲಿಂಗನ, ವಿನಾಯಕ ನಮಸ್ಕಾರ, ಪ್ರಶ್ನೆ, ಕಪಿಮುಷ್ಟಿ, ಯಾವುದನ್ನಾದರೂ ಕುಟ್ಟುವಂತೆ ಬಡಿಯುವುದಕ್ಕೆ, ಹೊರಗೆ ಹೋಗುವುದಕ್ಕೆ, ದರ್ಪ, ಧರ್ಮವನ್ನು ತಪ್ಪದೇ ಆಚರಿಸುವುದು, ಸ್ತನಪೀಡನ, ಈಟಿ, ಕತ್ತಿ ದೊಣ್ಣೆ, ಇವುಗಳನ್ನು ಹಿಡಿದುಕೊಳ್ಳುವುದು, ಕದನ, ಕುಚಗ್ರಹಣ, ತಾಂಡಾಳಿಕ ನಾಟ್ಯ, ಸೊಂಟ, ಛಲ, ಅರಸುಗಳ ಆಲೋಚನೆ, ಸಾಧಿಸುವುದು, ಭದ್ರನೆಂಬ ನಾಯಕ, ಕೀಳು ಜನರಿಗೆ ನಮಸ್ಕರಿಸುವುದು ಓಡುವುದು, ಮಲ್ಲಯುದ್ಧಗಳ ಸಂದರ್ಭದಲ್ಲಿ ಬಳಕೆಯಾಗುತ್ತದೆ.

ಸಂಕರ ಹಸ್ತ ಪ್ರಕಾರ ಮತ್ತು ಯಕ್ಷಗಾನದ ವಿಭಾಗದಲ್ಲಿ ಚಾರಕ–ವಿದೂಷಕ ಪಾತ್ರಗಳು, ವೃದ್ಧ, ಗಡ್ಡಧಾರಿ, ಗಡ್ಡ, ಗಡ್ಡದ ಕೂದಲು, ಕಾಕಪಕ್ಷ ಅಂದರೆ ಜುಲ್ಫಿ ಕೂದಲು ಎಂದು ತೋರಿಸಲು ಮುಷ್ಠಿಹಸ್ತವನ್ನು ಬಳಸುತ್ತಾರೆ.

ನವಗ್ರಹ ಬುಧನನ್ನು ಸೂಚಿಸಲು ಎಡಗೈಯಲ್ಲಿ ಅಡ್ಡಲಾಗಿ, ಮುಷ್ಟಿಹಸ್ತವನ್ನೂ, ಬಲಗೈಯಲ್ಲಿ ಪತಾಕಹಸ್ತವನ್ನೂ ಹಿಡಿಯಲಾಗುತ್ತದೆ. ಶುಕ್ರನನ್ನು ಸೂಚಿಸಲು ಎರಡೂ ಕೈಗಳಿಂದ ಮುಷ್ಟಿಹಸ್ತಗಳನ್ನು ಹಿಡಿದು ಎಡಗೈಯನ್ನು ಮೇಲ್ಭಾಗದಲ್ಲೂ, ಬಲಗೈಯನ್ನು ಕೆಳಭಾಗದಲ್ಲೂ ಹಿಡಿದು ಚಾಲಿಸಲಾಗುತ್ತದೆ.

*ಸಾಮಾನ್ಯ ಜೀವನದಲ್ಲಿಯೂ, ಮೇಲ್ಕಂಡ ಬಹುಪಾಲು ವಿನಿಯೋಗಗಳು ಸಂವಹನಕ್ಕೆ ಬಳಕೆಯಾಗುತ್ತವೆ. ಉದಾ: ಪ್ರಶ್ನೆ ಕೇಳುವುದು, ಗುದ್ದಲು, ಹೊಡೆಯುವುದು, ಸ್ಥಿರ, ಗಟ್ಟಿ–ಬಲವಾದದ್ದು ಎನ್ನಲು, ಇತ್ಯಾದಿ.*

*ಮುಷ್ಠಿಹಸ್ತದಲ್ಲಿ ಕಿರುಬೆರಳು ಚಾಚುವುದರಿಂದ **‘ಕ್ರೋಧಾಸ್ಯ’** ಎಂಬ ಹಸ್ತ ಉಂಟಾಗುತ್ತದೆ. ಇದು ಪುಂಡರೀಕನ ನರ್ತನ ನಿರ್ಣಯ ಗ್ರಂಥದಲ್ಲಿ ಉಲ್ಲೇಖಿತ. ಈ ಹಸ್ತವನ್ನು ವರಾಹ, ಕೋರೆದಾಡೆಗಳನ್ನು ಸೂಚಿಸಲು ಬಳಸುತ್ತಾರೆ.*

*ಒಂದರ ಮೇಲೊಂದರಂತೆ ಮೇಲುಗಡೆ ಮುಖಗಳು ಕೂಡಿರುವ ಮುಷ್ಠಿಯು **‘ಯೋಗಮುಷ್ಠಿ’** ಹಸ್ತವೆನಿಸಿಕೊಳ್ಳುತ್ತದೆ. ಇದೂ ಕೂಡಾ ನರ್ತನ ನಿರ್ಣಯದಲ್ಲಿ ಉಲ್ಲೇಖಿತ. ಇದರ ವಿನಿಯೋಗ: ಅರೆಯುವುದು, ತಿರುಗಿಸುವುದು, ಗುದ್ದುವುದು, ತಿಕ್ಕುವುದು.*

*ಎಡಕೈಯಲ್ಲಿ ಮುಷ್ಠಿ, ಬಲಕೈಯಲ್ಲಿ **‘ಮುಷ್ಠಿಮುದ್ರಹಸ್ತ’** ಮಾಡುತ್ತಾ ಮಣಿಕಟ್ಟನ್ನು ಸ್ಪರ್ಶಿಸುವುದು ಚಮರೀಮೃಗದ ಸಂಕೇತ.*

*ಅಂತೆಯೇ ಮುಷ್ಠಿ ಹಸ್ತದ ಹೆಬ್ಬೆರಳು ಮತ್ತು ಕಿರುಬೆರಳನ್ನು ಉದ್ದಕ್ಕೆ ನೀಡುವುದರಿಂದ **‘ಮುಷ್ಠಿ–ಮೃಗಹಸ್ತ’***

ಉಂಟಾಗುತ್ತದೆ. ಇದು ಕೃಷ್ಣ ಮೃಗವನ್ನು ಸೂಚಿಸಲು ಸಹಕಾರಿ.

ಇವಿಷ್ಟೇ ಅಲ್ಲದೆ, ಮುಷ್ಠಿ ಹಸ್ತವನ್ನು ವಿವಿಧ ರೂಪಗಳ ಸಂಕೇತಕ್ಕಾಗಿ ಬಳಸಲಾಗುತ್ತದೆ. ಆದರೆ ಅಭಿನಯ ದರ್ಪಣದಲ್ಲಿ ಉಲ್ಲೇಖಿತವಾಗದ ಈ ಪ್ರಯೋಗಗಳು ಸಾಕಷ್ಟು ಕಣ್ಮರೆಯಾಗಿವೆ. ಉದಾ:– ಲೋಕ ಪಾಲಕ ಮರುತನನ್ನು ಸೂಚಿಸಲು ಮುಷ್ಠಿ ಮತ್ತು ಅರ್ಧ ಪತಾಕ ಹಸ್ತಗಳನ್ನು ಬಳಸುತ್ತಾರೆ. ಬಲಪಾರ್ಶ್ವದಲ್ಲಿ ಮುಷ್ಠಿ ಮತ್ತು ಎಡ ಪಾರ್ಶ್ವದಲ್ಲಿ ಅರ್ಧ ಪತಾಕ ಹಸ್ತಗಳನ್ನು ಹಿಡಿದರೆ ಅಜನೆಂಬ ಲೋಕಪಾಲಕನನ್ನೂ ಸೂಚಿಸಬಹುದು. ಮುಷ್ಠಿಗಳನ್ನು ಇದಿರಿಗೆ ಹಿಡಿದು ಅಲುಗಾಡಿಸುವುದು ಪಾಂಡವ ಭೀಮನ ಸೂಚಕ. ಚಕ್ರವರ್ತಿ ಪುರೂರವನನ್ನು ಸೂಚಿಸಲೂ ಮುಷ್ಠಿ ಹಸ್ತದ ಬಳಕೆಯಿದೆ.

✵✵ ✵✵ ✵✵

## ನಾಟ್ಯಮಯೂರಿ

**ನ**ರ್ತನ ಮಾಡುತ ನಾಟ್ಯಮಯೂರಿ
ನರ್ತಿಸಿ ಬಂದಳು ರಂಗಸ್ಥಳಕೆ

ಕರದಲಿ ಜ್ಯೋತಿ ಬೆಳಗುತ ಬಂದಳು
ಬಾಗುತ ಬಳುಕುತ ನೃತ್ಯವ ಮಾಡಿ

ಕೊರಳಲಿ ಭಾರ ಮುತ್ತಿನ ಹಾರ
ಕಾಲಿನ ಗೆಜ್ಜೆಯ ಝಣಝಣ ನಾದ
ಕೈಯಲಿ ಉಂಗುರ ಪಟ್ಟೆ ಪೀತಾಂಬರ



ಥಕಧಿಮಿ ಮೃದಂಗದ ನಾದದ ಮೇಳ
ತಾಳಕೆ ಹೆಜ್ಜೆ ನಟನೆಯ ಲಜ್ಜೆ
ವಂದಿಸಿ ರಂಗಕೆ ಮಂಗಳ ಹಾಡುತ

ನರ್ತನ ಮಾಡುತ ನಾಟ್ಯಮಯೂರಿ

**(ವೃತ್ತಿಯಲ್ಲಿ ಹೋಮಿಯೋಪತಿ ವೈದ್ಯರೂ ; ಪ್ರವೃತ್ತಿಯಲ್ಲಿ ಕಲಾಸಕ್ತರೂ, ಕರಕುಶಲಗಾರರೂ, ಕವಿಗಳೂ ಆದ ವಿಟ್ಲದ ಗೋಪಾಲಕೃಷ್ಣ ಭಟ್ ಅವರ ರಚನೆ. )**

•••••••••••••••





# ಭಾರತೀಯ ಸಾಹಿತ್ಯದ ಅದ್ವಿತೀಯ ಪ್ರೇಮಗೀತೆ : 'ಗೀತಗೋವಿಂದ' (ಅಷ್ಟಪದಿ)

— 'ಮನೂ' ಬನ

**ಪರಮಾತ್ಮನೆಡೆಗೆ ಮಧುರ ಭಕ್ತಿ ಮತ್ತು ಶೃಂಗಾರಗಳ ನಿವೇದನೆ ; ಜೊತೆಗೆ ಮಾನವ ಸ್ವಭಾವಗಳ ನಿರೂಪಣೆಯನ್ನು ಹೊಂದಿರುವ ಅತ್ಯದ್ಭುತ, ಅಸಾಮಾನ್ಯ ಸಂಸ್ಕೃತ ಕಾವ್ಯ ರತ್ನವೆಂದರೆ ಗೀತಗೋವಿಂದ. ಇದನ್ನು ಪ್ರಥಮ ಗೀತನಾಟಕ ಅಥವಾ ಸಂಗೀತರೂಪಕವೆನ್ನಬಹುದು. ಅನೇಕ ಸಂಗೀತ, ನೃತ್ಯ, ನಾಟಕಗಳಿಗೂ ಮಾರ್ಗದರ್ಶಕ ಸರಸ ಕೃತಿಯಾಗಿರುವ ಇದು, ನಂದಿಕೇಶ್ವರನ ಹೇಳಿದಂತೆ ಆಂಗಿಕ, ವಾಚಿಕ, ಆಹಾರ್ಯ, ಸಾತ್ವಿಕ – ಹೀಗೆ..., ಚತುರ್ವಿಧ ಅಭಿನಯಗಳಿಗೆ ಹೇಳಿ ಮಾಡಿಸಿದ ವಸ್ತು.**

**ಕಾ**ವ್ಯಗಳೆಂದರೆ ಹಾಗೆ ! ವಾಚನದಲ್ಲಿ ಒಂದು ರೀತಿಯ ಅನುಭವವನ್ನಿತ್ತರೆ, ರಾಗ, ತಾಳ, ಭಾವ, ಲಯಗಳೊಂದಿಗೆ ನರ್ತಿಸಿದಾಗ ಮನಸ್ಸಿಗೆ ವಿಶಿಷ್ಟ ಅನುಭೂತಿಯನ್ನು ನೀಡುತ್ತದೆ. ಪಾರಮಾರ್ಥಿಕ ಗುಣಗಳಿಂದ ಕೂಡಿರುವ ಇವು, ಒಂದೆಡೆ ಸಂಕೀರ್ತನೆಯಾಗಿಯೂ, ಮತ್ತೊಂದೆಡೆ ಕಲಾವಿದರಿಗೆ ಗುಣಾತಿಶಯಗಳಿಂದ ಕೂಡಿದ ಭಾವಪೂರಿತ ರಸಾನುಭೂತಿಯಾಗಿಯೂ ಇರುತ್ತದೆ. ಅಂತವುಗಳ ಪೈಕಿ ಗೀತಗೋವಿಂದಕ್ಕೆ ಅದ್ವಿತೀಯ ಸ್ಥಾನ.

ಇದರ ಕರ್ತೃ ಜಯದೇವಕವಿ. ಒರಿಸ್ಸಾ ದೇಶದ ಪೂರಿ ಜಗನ್ನಾಥಕ್ಕೆ ಸಮೀಪವಾದ ಕಿಂದುಬಿಲ್ವ ಎಂಬ ಗ್ರಾಮದಲ್ಲಿ ಜನಿಸಿ ೧೨ನೇ ಶತಮಾನದಲ್ಲಿ ಬಾಳಿ ಬದುಕಿದ. ಬಂಗಾಳದ ಕೆಂದುಲಿ ಎಂಬ ಗ್ರಾಮವೇ ಕಿಂದುಬಿಲ್ವವಾಗಿ ಇದ್ದಿರಬೇಕೆಂಬುದು ಕೆಲವರ ಅಭಿಪ್ರಾಯ. ಈತನು ತನ್ನ ಏಳನೇ ಅಷ್ಟಪದಿಯ ಸಾಹಿತ್ಯದಲ್ಲಿ 'ಕಿಂದುಬಿಲ್ವ ಸಮುದ್ರ ಸಂಭವಂ' ಎಂಬುದಾಗಿ ಕ್ಷೇತ್ರಮುದ್ರೆ ಅಂದರೆ ತಾನಿದ್ದ, ಬಾಳಿದ ಸ್ಥಳದ ಸೂಚಕವನ್ನು ನೀಡಿದ್ದಾನೆ. ಬ್ರಾಹ್ಮಣಕುಲದ ಕೌಂಡಿನ್ಯ ಗೋತ್ರದ ಭೋಜದೇವ, ರಮಾದೇವಿ ಜಯದೇವನ ತಂದೆತಾಯಿಯರು.

ಈತ ಬಂಗಾಳದ ಸೋಮವಂಶದ ದೊರೆ ಲಕ್ಷ್ಮಣಸೇನನ ಆಸ್ಥಾನಕವಿ ಕೂಡಾ. ಉಮಾಪತಿಧರ, ಗೋವರ್ಧನ, ಶರಣದೇವ, ದುಹಿಸೇನ ಮೊದಲಾದ ಕವಿಗಳು ಈತನ ಸಮಕಾಲೀನರು. ಲಕ್ಷ್ಮಣಸೇನನು ಗೌಡ ಎಂಬಲ್ಲಿ ಅರಮನೆಯ ಶಿಲಾಶಾಸನವೊಂದರಲ್ಲಿ ತನ್ನ ಅಸ್ಥಾನದ

ಈ ಪಂಚರತ್ನ ಮಹಾಕವಿಗಳ ಹೆಸರುಗಳನ್ನು ಕೆತ್ತಿಸಿದ್ದಾನೆ. ಜಯದೇವನ ಇತರ ಕೃತಿಗಳು ಕಾರಕವಾದ, ರತಿ ಮಂಜರೀ, ತತ್ವಚಿಂತಾಮಣಿ.

ಇವನ ಜನ್ಮ, ಮರಣ, ಜೀವನದ ಕುರಿತು ಜಿಜ್ಞಾಸೆಗಳಿವೆ. ಅಂದಾಜು ೧೧೧೬ಯಲ್ಲಿ ಜನಿಸಿದ ಈತ ೧೨೦೦ ಇಸವಿಯ ವರೆಗೆ ಬದುಕಿದ ಇನ್ನುತ್ತದೆ ಒಂದು ವಾದ. ಕೆಲವು ವಿದ್ವಾಂಸರ ಪ್ರಕಾರ ಕ್ರಿ.ಶ.೧೧೫೩ರ ದಶಂಬರ ತಿಂಗಳ ೨೬ನೇ ತಾರೀಕಿನಂದು ಶ್ರೀಮುಖ ಸಂವತ್ಸರ ಮಾರ್ಗಶಿರ ಕೃಷ್ಣ ಏಕಾದಶಿಯಂದು ಸ್ವರ್ಗಸ್ಥನಾದ. ಆದರೆ ಬಹುಪಾಲು ಜನ ಪುಷ್ಯಮಾಸದ ಸಪ್ತಮೀ ತಿಥಿಯಂದು ಜಯದೇವನ ಪುಣ್ಯದಿನವಾಚರಿಸುತ್ತಾರೆ. ಅಷ್ಟೇ ಅಲ್ಲ, ಕೆಲವರು ಶ್ರೀಕೃಷ್ಣಕರ್ಣಾಮೃತದ ಕರ್ತೃ ಲೀಲಾಶುಕನೇ ಜಯದೇವನಾಗಿ ಜನ್ಮ ತಳೆದನೆನ್ನುತ್ತಾರೆ. ಇನ್ನೂ ಕೆಲವು ವಿಮರ್ಶಕರು ಶ್ರೀಕೃಷ್ಣಕರ್ಣಾಮೃತದ ಶ್ಲೋಕಗಳನ್ನು ಅಷ್ಟಪದಿಗಳಲ್ಲಿ ಬಳಸಲಾಗಿರುವುದೇ ಇದಕ್ಕೆ ಕಾರಣ ಎನ್ನುತ್ತಾರೆ. ಆದರೂ ಗೀತಗೋವಿಂದದ ಕುರಿತಾದ ವ್ಯಾಖ್ಯಾನಗಳಾದ ಶಂಕರಮಿಶ್ರನ ರಸಮಂಜರೀ, ರಾಣಾಕುಂಭನ ರಸಿಕಪ್ರಿಯಾ, ಮತ್ತು ಭಕ್ತಮಾಲಾ, ಲಕ್ಷ್ಮೀಧರನ ಶ್ರುತಿರಂಜನಿ, ಕೃಷ್ಣದತ್ತನ ಶಶಿಲೇಖಾ, ಜಗಧ್ಧರನ ಸಾರದೀಪಿಕಾ, ದೀಪಿಕಾ ಎಂಬ ಗೋಪಾಲಪಂಡಿತನ ಟೀಕೆ ಮುಂತಾದ ಗ್ರಂಥಗಳಿಂದ ಜಯದೇವನ ಕುರಿತ ವಿಷಯಗಳಿಗೆ ಪುಷ್ಟಿ ದೊರಕಿದೆ.

ಈ ಕಾವ್ಯದ ಕುರಿತಾಗಿ ಭಗವತ್ ದರ್ಶನವನ್ನು ಸಾಕ್ಷೀಕರಿಸಿದ ಅನೇಕ ಪವಾಡಗಳು, ಉಪಕಥೆಗಳೂ ಇವೆ. ಇದು ಸರಳಮನಸ್ಕ ಮಾನವನ ಆತ್ಮ ಹೃದಯಗಳನ್ನು ಪರಮಾತ್ಮನತ್ತ ಕೊಂಡೊಯ್ಯುವ ಪ್ರೌಢ ಕಾವ್ಯ. ಭಾರತೀಯ ಶಾಸ್ತ್ರೀಯ ಸಂಗೀತ ಮತ್ತು ನೃತ್ಯಕಲೆ, ನೃತ್ಯನಾಟಕ, ರೂಪಕಗಳೆಲ್ಲದರಲ್ಲೂ ಬಹುಮಟ್ಟಿಗೆ ಬಳಸುವ, ನಾಯಿಕಾ ನಾಯಕ ಭಾವಕ್ಕೆ ಹೇರಳ ಅವಕಾಶವಿರುವ ಶೃಂಗಾರಪೂರಿತ, ವೈಭವಯುತ, ಧ್ವನಿಪೂರ್ಣ, ಶ್ರುತಿಮನೋಹರ, ವಿದ್ವತ್‌ಪೂರ್ಣ, ಅಲಂಕಾರಿಕ ನಿವೇದನೆ. ಒಟ್ಟಿನಲ್ಲಿ 'ನಭೂತೋ ನ ಭವಿಷ್ಯತಿ' ಎಂಬಂತದ್ದು.

ಚಿಕ್ಕಂದಿನಲ್ಲಿಯೇ ಗೆಳೆಯ ಪರಾಶರನೊಂದಿಗೆ ಮಥುರೆ, ಬೃಂದಾವನಗಳಿಗೆ ಹೋಗಿ ಅಲ್ಲಿ ರಾಧಾಕೃಷ್ಣರ ಮೋಹಕ ವರ್ಣನೆಯನ್ನು ಕೇಳಿದ ಜಯದೇವನಿಗೆ ಕೃಷ್ಣಭಕ್ತಿ ಜಾಗೃತಗೊಂಡಿತು. ಅದೇ ನೆನವರಿಕೆಯಲ್ಲಿ ತನ್ನ ವ್ಯಾಸಂಗವನ್ನು ಬಿಟ್ಟು ಜಯದೇವ ಊರ ಹೊರಗಿನ ಪರ್ಣಶಾಲೆಯಲ್ಲಿ ನಿತ್ಯವೂ ಧ್ಯಾನಾಸಕ್ತನಾಗಿ ವಿರಾಗಿಯಾಗಿ ಇರತೊಡಗಿದ. ಕ್ರಮೇಣ ಸಂಸ್ಕೃತದಲ್ಲಿ ಅತಿಶಯ ಪಾಂಡಿತ್ಯ ಪಡೆದು ಕವಿಶ್ರೇಷ್ಠ ವಿದ್ವಾಂಸನೆನಿಸಿದ. ಕಈತನು ಗೋವರ್ಧನಾಚಾರ್ಯರ ಶಿಷ್ಯನೆಂಬುದು ಪ್ರತೀತಿ.

ಅದೇ ಗ್ರಾಮದ ದೇವಶರ್ಮ, ವಿಮಲಾಂಬ ದಂಪತಿಗಳಿಗೆ ಸಂತಾನವಿಲ್ಲದೆ, ಕೊನೆಗೆ ತಮ್ಮ ಮೊದಲ ಮಗುವನ್ನೇ ಪರಮಾತ್ಮನಿಗೆ ಕಾಣಿಕೆಯಾಗಿ ನೀಡುವ ಹರಕೆ ಹೊತ್ತಿರುತ್ತರೆ. ಇದರ ಫಲವಾಗಿ ಪದ್ಮಾವತಿಯೆಂಬ ಮಗಳು ಜನಿಸಿರುತ್ತಾಳೆ. ಅವಳು





ಪ್ರಾಪ್ತ ವಯಸ್ಕಳಾದಾಗ ಹರಕೆಯಂತೆ ಜಗನ್ನಾಥ ದೇವಾಲಯಕ್ಕೆ ಆಕೆಯನ್ನು ಕರೆತಂದು ದೇವರ ಸನ್ನಿಧಿಯಲ್ಲಿ ಬಿಟ್ಟುಹೋಗುತ್ತಾರೆ. ಆದರೆ ಅಲ್ಲಿನ ಅರ್ಚಕರಿಗೆ ಕನಸಿನಲ್ಲಿ ಪರಮಾತ್ಮನು ಕಾಣಿಸಿಕೊಂಡು ತನ್ನ ಅಂಶದಿಂದ ಜನಿಸಿದ ಜಯದೇವನಿಗೆ ಕನ್ಯೆಯನ್ನು ಮದುವೆ ಮಾಡಿಕೊಡುವಂತೆ ತಿಳಿಸುತ್ತಾನೆ. ಆದರೆ ಜಯದೇವನು ನಂಬದೆ, ಪರಿಹಾಸ್ಯ ಮಾಡಿ, ಅಂಗೀಕರಿಸದೇ ವಿರಾಗಿಯಾಗಿ ಉಳಿಯುವ ನಿರ್ಧಾರ ಮಾಡುತ್ತಾನೆ. ಕೊನೆಗೆ ಜಯದೇವನನ್ನು ಪದ್ಮಾವತಿಯು ಪ್ರಾರ್ಥಿಸಿ, ಒಲಿಸಿಕೊಳ್ಳುತ್ತಾಳೆ. ಆಕೆಯ ಭಕ್ತಿಪರಾಯಣತೆಗೆ ಆಕರ್ಷಿತನಾಗಿ ಅವರೀರ್ವರ ವಿವಾಹ ಜರುಗುತ್ತದೆ.

ಪತಿಭಕ್ತಳೂ, ಭಗವದ್ಭಕ್ತಳೂ ಆದ ಜಯದೇವನ ಪತ್ನಿಯೇ ಗೀತಗೋವಿಂದಕ್ಕೆ ಪ್ರೇರಣೆ ನೀಡಿದವಳೆನ್ನಲಾಗಿದೆ. ಪತಿ ಕವಿಯಾದರೆ, ಪದ್ಮಾವತಿ ಸಂಗೀತ–ನೃತ್ಯ ಪ್ರವೀಣೆ! ಅಗಾಧ ಪ್ರೇಮವುಳ್ಳ ದಾಂಪತ್ಯ ಇವರದ್ದು. ಪತಿಯಲ್ಲಿ ಹುದುಗಿದ್ದ ಶಕ್ತಿಯನ್ನು ಅರಳಿಸಿ ಸ್ಫೂರ್ತಿ ನೀಡಿ, ಆತ ಅಷ್ಟಪದಿಗಳನ್ನು ಹಾಡಿದಾಗ ಪತ್ನಿ ಪದ್ಮಾವತಿಯು ಕವಿತೆಯ ಅರ್ಥಕ್ಕನುಸಾರವಾಗಿ ಗಾನ–ನರ್ತನದಲ್ಲಿ ಜೊತೆಯಾಗಿ ಸಂಕೀರ್ತಿಸುತ್ತಾ ಕೃಷ್ಣನ ಲೀಲಾವಿನೋದಗಳನ್ನು ನೆನೆಯುತ್ತಾ ಆನಂದಿಸುತ್ತಿದ್ದರೆನ್ನಲಾಗಿದೆ. ಅಲ್ಲದೆ ಜಯದೇವನು ಗೀತಗೋವಿಂದದ ಆದಿಯಲ್ಲಿ 'ಪದ್ಮಾವತಿ ಚರಣ ಚಾರಣ ಚಕ್ರವರ್ತಿ' ಎಂದು ಹೇಳಿಕೊಂಡಿದ್ದಾನೆ. ಅಂದರೆ ಅಷ್ಟಪದಿಗಳನ್ನು ಹಾಡುವಾಗ ಆಕೆ ನರ್ತಿಸುವುದರ ಮೂಲಕ ಭಗವಂತನ ಸೇವೆ ಮಾಡುತ್ತಿರುವುದನ್ನು ಮನೋಜ್ಞವಾಗಿ ಚಿತ್ರಿಸಿದ್ದಾನೆ. ಕೊನೆಗೆ ಕಥಕಂದಿ (ಜಯದೇವಪುರ) ಗ್ರಾಮದಲ್ಲಿ ಗೀತಗೋವಿಂದವನ್ನು ಬರೆದು ಪೂರ್ಣಗೊಳಿಸಿದನಂತೆ. ಇವನ ಅಷ್ಟಪದಿಗಳನ್ನು ಕೇಳಿ ಪರಮಸಂತುಷ್ಟನಾಗಿ ಈತನ ವೈಷ್ಣವ ಧರ್ಮವನ್ನೇ ಚೈತನ್ಯನು ಬಂಗಾಳಕ್ಕೆ ಒಯ್ದನಂತೆ!

ಅಷ್ಟಪದಿ–ಎರಡೆರಡು ಸಾಲಿನ ಎಂಟು ಸಾಹಿತ್ಯವಿರುವ ಕಾವ್ಯ. ಗೀತಗೋವಿಂದ ಅಷ್ಟಪದಿಗಳೆಲ್ಲವನ್ನೂ ಹೊಂದಿರುವ ಸಮಗ್ರ ಕಾವ್ಯರೂಪ. ಸಂಗೀತ–ನೃತ್ಯಗಳಿಗಾಗಿ ಕಲಾವಿದರು ಗೀತಗೋವಿಂದದಿಂದ ಕೆಲವು ಭಾಗಗಳನ್ನಷ್ಟೇ ಆಯ್ದುಕೊಳ್ಳುತ್ತಾರೆ. 'ಜಯದೇವ' ಎಂಬುದು ಅಷ್ಟಪದಿಗಳ ಅಂಕಿತ. ಇದರಲ್ಲಿ ಒಟ್ಟು ಎಂಟು ಪಾದಗಳುಳ್ಳ ೨೪ ಅಷ್ಟಪದಿಗಳು, ಮಧ್ಯೆ ಹಲವು ಸಂಯೋಜನಾ ಶ್ಲೋಕಗಳು ಇವೆ. ಅವುಗಳನ್ನು ೧೨ ಸರ್ಗಗಳಾಗಿ ವಿಂಗಡಿಸಿ ಒಂದೊಂದಕ್ಕೂ ಕೃಷ್ಣನ ಲೀಲಾವಿನೋದಗಳ ಹೆಸರನ್ನು ಮನೋಜ್ಞವಾಗಿ ನೀಡಲಾಗಿದೆ. ಹನ್ನೆರಡು ಸರ್ಗಗಳು ಭಾಗವತಪುರಾಣದ ೧೨ ಕಾಂಡಗಳನ್ನು, ಇಪ್ಪತ್ತನಾಲ್ಕು ಅಷ್ಟಪದಿಗಳು ಗಾಯತ್ರೀಮಂತ್ರದ ೨೪ ಅಕ್ಷರಗಳನ್ನು

ನೆನಪಿಸುತ್ತವೆ.ಅವುಗಳು, ಅವು ಒಳಗೊಂಡ ಅಷ್ಟಪದಿಗಳು ಹಾಗೂ ರಾಗಗಳು ಹೀಗಿವೆ:

* ಸಾಮೋದರ ದಾಮೋದರ: ೧-೪ – ಮಾಯಮಾಳವಗೌಳ, ಗುರ್ಜರಿ, ಲಲಿತ, ರಾಮಕಮರಿ
* ಅಕ್ಲೇಶ ಕೇಶವ : ೫-೬ – ಗುರ್ಜರಿ, ಮಾಳವಗೌಳ,
* ಮುಗ್ಧ ಮಧುಸೂದನ : ೭ – ಗುರ್ಜರಿ
* ಸ್ನಿಗ್ಧ ಮಧುಸೂಧನ : ೮-೯ – ಕರ್ಣಾಟ, ದೇಶಾಖ್ಯ
* ಸಾಕಾಂಕ್ಷ ಪುಂಡರೀಕಾಕ್ಷ : ೧೦-೧೧- ದೇಶೀವರಾಡಿ, ಗುರ್ಜರಿ
* ಧನ್ಯ ವೈಕುಂಠ ಕುಂಕುಮ: ೧೨ – ಗುಣಕರಿ
* ನಾಗರ ನಾರಾಯಣ : ೧೩-೧೬- ಮಾಳವ, ವಸಂತ, ಗುರ್ಜರಿ, ದೇಶವರಾಡಿ
* ವಿಲಕ್ಷ್ಯ ಲಕ್ಷ್ಮೀಪತಿ : ೧೭ – ಭೈರವಿ
* ಮುಗ್ಧ ಮುಕುಂದ : ೧೮ – ಗುರ್ಜರಿ
* ಚತುರ ಚತುರ್ಭುಜ : ೧೯ – ದೇಶವರಾಡಿ
* ಸಾನಂದ ದಾಮೋದರ : ೨೦-೨೨- ವಸಂತ, ವರಾಡಿ
* ಸುಪ್ರೀತ ಪೀತಾಂಬರ : ೨೩-೨೪- ವಿಭಾಸ ,ರಾಮಕರಿ

ಗೀತಗೋವಿಂದದ ೧೦ನೇ ಸರ್ಗದ ೧೯ನೇ ಅಷ್ಟಪದಿಯ ೭ನೇಯ ಚರಣವನ್ನು ಕುರಿತು ಬರೆಯುವಾಗ, ಕೃಷ್ಣ ಪರಮಾತ್ಮನು 'ತನ್ನ ತಲೆಯ ಮೇಲೆ ರಾಧೆಯ ಚರಣಕಮಲವನ್ನಿಟ್ಟು ತನ್ನ ಕಾಮಬಾಧೆಯನ್ನು ಹೋಗಲಾಡಿಸು' ಎಂದು ರಾಧೆಯಲ್ಲಿ ಕೇಳುವ ಪ್ರಸಂಗವು ಕವಿಗೆ ಹೊಳೆಯುತ್ತದೆ. ಆದರೆ ಇದು ಮೂರ್ಖತನ, ಅಪಚಾರದ ಕೆಲಸವೆಂದು ಭಾವಿಸಿದ ಜಯದೇವ, ಇಂತಹ ವರ್ಣನೆಗಳೂ ಪರಮಾತ್ಮನ ಚಾರಿತ್ರ್ಯವನ್ನು ಅಪವಿತ್ರಗೊಳಿಸೀತು ಎಂದು ಭಾವಿಸಿ ಆ ಪಂಕ್ತಿಗಳನ್ನು ಅಳಿಸಿ ಅಲ್ಲಿಗೇ ಬಿಟ್ಟು ಪದ್ಮಾವತಿಯಲ್ಲಿ ನೀಡಿ ಶುಚಿಯಾಗಲು ಸ್ನಾನಕ್ಕೆ ಹೋದನಂತೆ. ಆಗ ಶ್ರೀಕೃಷ್ಣನು ಜಯದೇವನ ವೇಷ ತಾಳಿ ಬಂದು ಪದ್ಮಾವತಿಯಿಂದ ತಾಲಪತ್ರವನ್ನು ಕೇಳಿ ಪಡೆದು ಅಳಿಸಿದ ಸಾಲುಗಳನ್ನು ಪುನಃ ಬರೆದು ಹೋದನಂತೆ ! ಸ್ನಾನವನ್ನು ಮುಗಿಸಿ ಹಿಂತಿರುಗಿಬಂದ ಜಯದೇವ ತಾನು ಬರೆಯಬೇಕೆಂದು ಇಚ್ಛಿಸಿದ ವಾಕ್ಯಗಳನ್ನು 'ಬರೆದವರು ಯಾರು' ಎಂಬುದಾಗಿ ಪದ್ಮಾವತಿಯಲ್ಲಿ ಪ್ರಶ್ನಿಸಿದ. ಆಶ್ಚರ್ಯಚಕಿತಳಾದ ಆಕೆ ಆಗ ಬಂದು ಬರೆದುಹೋದ ಜಯದೇವನ ಸಂಗತಿಯನ್ನು ತಿಳಿಸಲಾಗಿ ಪರಮಾತ್ಮನ ಲೀಲೆಯನ್ನು ನೆನೆದು ಕೊಂಡಾಡಿದನಂತೆ!

ಜೊತೆಗೆ, ಕವಿಯು ದೊರೆ ಲಕ್ಷ್ಮಣಸೇನನ ಅಸ್ಥಾನದಲ್ಲಿದ್ದಾಗ, ದೊರೆಯು





ಬೇಟೆಗೆ ಕರೆದುಕೊಂಡು ಹೋದ ಸಮಯದಲ್ಲಿ ಆಕೆಯ ಪುಣ್ಯದ ಕುರಿತು ಅಸೂಯಾಪರಳಾದ ಆತನ ರಾಣಿಯು ಪದ್ಮಾವತಿಯಲ್ಲಿ ಜಯದೇವನು ಮರಣ ಹೊಂದಿದನೆಂದು ಸುಳ್ಳು ಹೇಳುತ್ತಾಳೆ. ಇದರಿಂದ ನೊಂದ ಪದ್ಮಾವತಿ ಕೆಳಕ್ಕೆ ಬಿದ್ದು ಸಾವಿಗೀಡಾಗುತ್ತಾಳೆ. ಹಿಂತಿರುಗಿ ಬಂದ ಜಯದೇವ ವಿಷಯ ತಿಳಿದು, ರಾಜ-ರಾಣಿಯರನ್ನೂ ಸಮಾಧಾನಿಸಿ ೧೯ನೇ ಅಷ್ಟಪದಿಯನ್ನು ಹಾಡಿ ಆಕೆಯನ್ನು ಜೀವಂತಳನ್ನಾಗಿಸಿದ ಎನ್ನಲಾಗಿದೆ. ಆದ್ದರಿಂದ ಸ್ವಯಂ ಪರಮಾತ್ಮನೇ ಬಂದು ಕೃತಿಯನ್ನು ಸ್ವೀಕರಿಸಿದ್ದರಿಂದ ಆ ಅಷ್ಟಪದಿಯನ್ನು ದರ್ಶನ ಅಷ್ಟಪದಿಯೆಂದು, ಸಂಜೀವಿನಿ ಅಷ್ಟಪದಿಯೆಂದು ಹೇಳುತ್ತಾರೆ.

ಅಷ್ಟಪದಿ ದ್ವಿಧಾತು ಪ್ರಬಂಧ. ಅಂದರೆ ಉದ್ಗ್ರಾಹ(ಚರಣ) ಮತ್ತು ದ್ರುವ( ಪಲ್ಲವಿ) ಎಂಬ ಎರಡು ಭಾಗಗಳನ್ನು ಹೊಂದಿರುವಂತದ್ದು. ಈ ರೀತಿಯ ಪ್ರಬಂಧವನ್ನು ರಚಿಸಿರುವವರಲ್ಲಿ ಜಯದೇವನು ಮೊದಲಿಗನು. ಸಾಕಷ್ಟು ಸಲ ಅಂತ್ಯಪ್ರಾಸವನ್ನು ಹೊಂದಿರುವ ಇವು ಅಲಂಕಾರ, ಯಮಕಗಳಿಂದ ಕೂಡಿವೆ.

ಜಯದೇವನು ಗೀತಗೋವಿಂದವನ್ನು 'ಶೃಂಗಾರ ಮಹಾಕಾವ್ಯ'ವೆಂದು ಕರೆದುಕೊಂಡಿದ್ದಾನೆ. ಕೆಲವೊಂದೆಡೆ ಗೇಯಗುಣಗಳುಳ್ಳ ಪ್ರಬಂಧವೆಂದು ಕರೆದಿದ್ದಾನೆ. ಆದರೆ ಮಹಾಕಾವ್ಯಗಳಿಗಿರಬೇಕಾದ ಲಕ್ಷಣಗಳಿಲ್ಲವೆನ್ನುವುದು ಕಾವ್ಯ ಮೀಮಾಂಸಿಗರ ತರ್ಕ. ಅವರ ಪ್ರಕಾರ ಇದು ಖಂಡಕಾವ್ಯ. ಗೀತ ಪ್ರಧಾನವಾದ ಪ್ರಬಂಧರೂಪದ ಭಾವಾತಿರೇಕದ ವರ್ಣನಾತ್ಮಕ, ಕಲ್ಪನಾ ಕಥಾಮೃತ. ಅತ್ತ ಭಾವಗೀತೆಯೂ ಅಲ್ಲ, ಇತ್ತ ನಾಟಕವೂ ಅಲ್ಲ ಎಂಬಂತಿರುವುದು ಇದರ ಸ್ವಾರಸ್ಯ. ಒಟ್ಟಿನಲ್ಲಿ ಗೀತಗೋವಿಂದ ಪ್ರೇಮ-ಭಕ್ತಿಗೀತೆಗಳ ರತ್ನ. ಸುಂದರ ಪ್ರಣಯ ಪ್ರಪಂಚ, ಮಧುರಭಕ್ತಿಯ ಅಪೂರ್ವ ಸಂಯೋಗ.

ಈ ಗೀತಗೋವಿಂದವನ್ನೇ ಅನುಕರಿಸಿ ಕೆಲವು ಕಾವ್ಯ, ಅಷ್ಟಪದಿಗಳು ಸಿದ್ಧವಾದದ್ದಿದೆ. ಉದಾ- ಹರಿಶಂಕರನ ಗೀತರಾಘವ, ರಾಮಭಟ್ಟನ ಗೀತಗಿರೀಶ, ವಂಶಮಣಿಯ ಗೀತದಿಗಂಬರ, ಪುರುಷೋತ್ತಮಮಿಶ್ರನ ಅಭಿನವ ಗೀತಗೋವಿಂದ, ಚತುರ್ಭುಜನ ಗೀತಗೋಪಾಲ, ಸದಾಶಿವ ದೀಕ್ಷಿತನ ಗೀತಸುಂದರ, ಅನಂತನಾರಾಯಣನ ಗೀತಶಂಕರ, ತಿರುಮಲನ ಗೀತಗೌರೀ, ಚಿಕ್ಕದೇವರಾಜ ಒಡೆಯರ್ ಅವರ ಗೀತಗೋಪಾಲ, ಕಳಲೆ ನಂಜರಾಜಾನ ಗೀತಗಂಗಾಧರ, ವೆಂಕಟಮುಖಿಯ ತ್ಯಾಗರಾಜಾಷ್ಟಪದಿ, ಉಪನಿಷದ್ ಬ್ರಹ್ಮೇಂದ್ರರ ರಾಮಾಷ್ಟಪದಿ, ಕಂಚಿ ಮಠದ ಚಂದ್ರಶೇಖರೇಂದ್ರ ಸರಸ್ವತಿಗಳ ಶಿವಗೀತಮಾಲಿಕೆ, ಧುಂಡಿರಾಜ ಕವಿಯ ಷಾಹಾವಿಲಾಸಗೀತ..ಹೀಗೆ.

ಆದರೆ, ಗೀತಗೋವಿಂದವು ಜಯದೇವ ಕವಿಯ ಅಂತರಾತ್ಮದ ಗೀತೆಯಾಗಿರುವುದರಿಂದಲೋ ಏನೋ, ಪರಮಾತ್ಮನ ಕುರಿತಾಗಿ ಪ್ರಣಯಲೀಲೆ, ಮಿಲನದ

ನಿರೂಪಣೆಯಿರುವ ಮತ್ಯಾವ ಕಾವ್ಯವೂ ಇಷ್ಟೊಂದು ಸ್ವಾರಸ್ಯವಾಗಿಲ್ಲ. ಇದರಲ್ಲಿರುವ ಸಂಗೀತದ ಗುಣ, ಪರಮಾತ್ಮನ ಧ್ಯಾನ, ಶೃಂಗಾರ ಸಾರ –ಈ ಮೂರು ಗುಣಗಳು ಮತ್ತೆಲ್ಲಾ ಕಾವ್ಯಗಳಿಗಿಂತ ಜನಪ್ರಿಯವಾಗಿಸುವಲ್ಲಿ, ಹೆಗ್ಗಳಿಕೆ ಪಡೆಯುವಲ್ಲಿ ಕಾರಣವೆನಿಸಿವೆ. ಜೊತೆಗೆ ಸಂಬಂಧಿಸಿದ ಪವಾಡಸದೃಶ ಕಥೆಗಳೂ ಮಹಿಮೆಯನ್ನು ಹೆಚ್ಚು ಮಾಡಿವೆ.

ಪರಮಾತ್ಮನಲ್ಲಿ ಭಕ್ತನು ಇಟ್ಟಿರುವ ಪ್ರೀತಿ–ನಂಬಿಕೆ–ಭಕ್ತಿ, ಮಧುಮಾಸ, ಯಮುನಾತೀರ, ಬೃಂದಾವನ, ಶೃಂಗಾರ ರಸ, ರಸಿಕತೆ ಇಲ್ಲಿನ ಕಥಾವಸ್ತು. ಆದರೂ ಇದರಲ್ಲಿ ಕಥೆ, ಕಥನಗಳೇನೂ ಇಲ್ಲ. ವಿಶಿಷ್ಟ ಪ್ರಸಂಗ ವರ್ಣನೆಯಿಲ್ಲ. ಬ್ರಹ್ಮವೈವರ್ತ ಪುರಾಣದಲ್ಲಿ ಬರುವ ಒಂದು ಪ್ರಸಂಗವನ್ನು ಆಧರಿಸಿ ಇಡೀ ಕಾವ್ಯ ರಚಿತವಾಗಿರಬಹುದೆಂದು ಊಹೆ. ಇಲ್ಲಿ ರಾಧೆ, ಕೃಷ್ಣ, ಸಖಿಯ ಪಾತ್ರಗಳಿದ್ದು ಲಾಲಿತ್ಯ, ಸರಳತೆಯುಳ್ಳ ಮಾನವ ಸಹಜ ಭಾವನಿರೂಪಣೆಯಿದೆ.

ಕಾವ್ಯದ ನಾಯಕ ಕೃಷ್ಣ. ಅವನ ಸ್ವಭಾವ ಧೀರ ಲಲಿತ. ಕಾವ್ಯದ ಕ್ರಿಯೆ ಕೃಷ್ಣನ ಶುದ್ಧ ಶೃಂಗಾರ–ಪ್ರಣಯ. ಆದರೂ ಅಷ್ಟವಿಧ ನಾಯಿಕೆಯರ, ಚತುರ್ವಿಧ ನಾಯಕರ ಲಕ್ಷಣಗಳು ಹೇರಳವಾಗಿ ಕಂಡುಬರುತ್ತವೆ. ಕೆಲವು ಪದಗಳಲ್ಲಿ ಅಶ್ಲೀಲವೆನಿಸುವ ಭಾವಗಳು ಎದುರಾದರೂ, ಕಾಮಪ್ರಚೋದನೆ ಈ ಕಾವ್ಯದ ಉದ್ದೇಶ ಅಲ್ಲ. ಇಲ್ಲಿನದು ಇಂದ್ರಿಯಗ್ರಾಹ್ಯ, ಕ್ಷುದ್ರ, ಸ್ವಾರ್ಥಪರ, ಸುಖಾಪೇಕ್ಷಿ ಲೈಂಗಿಕವಿಜ್ಞಾನದ ಕೀಳು ಪ್ರೇಮವಲ್ಲ. ಸುಖದಾಂಪತ್ಯ ಸಾಧನೆಯ ಬಿಟ್ಟಿ ಸಲಹೆಗಳಿಲ್ಲಿಲ್ಲ.

ಕೃಷ್ಣನಿಗಾಗಿ ರಾಧೆ ಕಾಯುವುದು, ಆಪ್ತಸಖಿಯು ಕೃಷ್ಣನು ಗೋಪಿಕೆಯರೊಂದಿಗೆ ವಿಹರಿಸುತ್ತಿರುವ ಬಗ್ಗೆ ಹೇಳುವುದು, ರಾಧೆಯ ಪರಿತಾಪ, ರಾಧೆಯ ಸಂತೈಕೆಗೆ ಕೃಷ್ಣನು ಸಖಿಯಲ್ಲಿ ಬೇಡುವುದು, ಆಕೆಯ ವಿವಿಧ ಅವಸ್ಥೆಗಳ ವಿವರಣೆ, ಕೃಷ್ಣನ ಮೇಲೆ ರಾಧೆಯ ಆಕ್ರೋಶ, ಪರಸ್ಪರ ಕ್ಷಮಾಪಣೆ, ವಿಲಾಪ, ರಾಧಾಕೃಷ್ಣರ ಸಂಗಮ–ಸಲ್ಲಾಪ... ಈ ರೀತಿಯಾಗಿ ಹೃದಯಂಗಮ, ಮನಃಸ್ಪರ್ಶಿ, ರೋಮಾಂಚನಕಾರಿ ಸನ್ನಿವೇಶ. ಪರಸ್ಪರ ಅನುರೂಪವಾದ ಮಹಿಮಾಮಯ ವ್ಯಕ್ತಿಗಳ ಅವಿನಾಭಾವ ಪ್ರೇಮಾರಾಧನೆ. ಸಂಪೂರ್ಣ ಲಯ ಹೊಂದುವ ಅಲೌಕಿಕ, ಅತಿಮಾನುಷ, ಅನಿರ್ದಿಷ್ಟ ಸೂಕ್ಷ್ಮ ಪ್ರೇಮದ ಚಿತ್ರಣ.

ಜಯದೇವ ಕವಿಯೇ ಈ ಗೀತೆಗಳಿಗೆ ಆಗ ತಿಳಿಸಿದಂತೆ ಆ ಕಾಲದ ರಾಗತಾಳಗಳನ್ನು ಪ್ರಯೋಗಿಸಿದ್ದರೂ, ಅವ್ಯಾವುವೂ ಚಾಲ್ತಿಯಲ್ಲಿಲ್ಲ. ನಂತರ ಗೀತಗೋವಿಂದಕ್ಕೆ ರಾಗತಾಳಗಳ ಗಾನಕ್ರಮ ವ್ಯವಸ್ಥೆ ಮಾಡಿದವನು ಮೇವಾಡದ ರಾಜ ರಾಣಾಕುಂಭ. ಜಯದೇವನಿಗೂ ಇವನಿಗೂ ೨೦೦ ವರ್ಷಗಳ ಅಂತರ. ಇವನ ಪದ್ಧತಿ ಹಿಂದೂಸ್ಥಾನಿ ಸಂಗೀತಕ್ಕೆ ಒಪ್ಪುವ ಕ್ರಮವಾದರೆ, ತಿರುಮಲರಾಜಪಟ್ಟಣದ ರಾಮುಡು ಭಾಗವತರು ಕರ್ನಾಟಕ ಸಂಗೀತಕ್ಕೊಪ್ಪುವ ಸ್ವರೂಪ ಅಳವಡಿಸಿದರು. ಈಗ, ಉತ್ತರ





ಭಾರತದಲ್ಲಿ ದೇಶೀಯ ರಾಗದಲ್ಲಿ ಹಾಡುವ ವಾಡಿಕೆಯಿದ್ದರೆ, ಕೆಲವು ಕಲಾವಿದರು ರೂಢಿಯಲ್ಲಿರುವ ಮತ್ತು ತಮ್ಮ ಕಲ್ಪನಾಶಕ್ತಿಗನುಗುಣವಾಗಿ ಹಾಡಿ ಅಭಿನಯಿಸುತ್ತಾರೆ.

ಅಷ್ಟಪದಿಯು ನೃತ್ಯನಾಟಕಕ್ಕೆ ಹೆಚ್ಚಾಗಿ ಒಪ್ಪುವಂತಹ ಕಾವ್ಯ. ಆದರೂ, ಇದರಲ್ಲಿನ ಉತ್ಕೃಷ್ಟ ಮಟ್ಟದ ಛಂದೋರಚನೆಯು ಸಂಗೀತ ಮತ್ತು ನೃತ್ಯದ ಎಲ್ಲಾ ಪ್ರಕಾರಗಳಿಗೆ ಅಡಕಗೊಳ್ಳುವಂತಿದ್ದು, ಎಲ್ಲಾ ರೀತಿಯ ನೃತ್ಯಗಳಲ್ಲೂ ಇದನ್ನು ಆಕರ್ಷಕವಾಗಿ ಸಂಯೋಜಿಸಬಹುದು.

ಒಡಿಸ್ಸಿ ನೃತ್ಯ ಪ್ರಕಾರದಲ್ಲಿ ಅಷ್ಟಪದಿಯೇ ಪ್ರಮುಖ ನೃತ್ಯ. ಇಂದಿಗೂ ಪೂರಿ ಜಗನ್ನಾಥ ದೇವಾಲಯದಲ್ಲಿ ಪ್ರತೀದಿನ ಸಂಜೆ ಗೀತಗೋವಿಂದವನ್ನು ಶಾಸ್ತ್ರವತ್ತಾಗಿ ಹಾಡಿ ಮಂಗಳಾರತಿಯೆತ್ತುವ, ಎರಡು ಅಷ್ಟಪದಿಗಳನ್ನಾದರೂ ಹಾಡಿ ಅಭಿನಯಿಸುವ ಪದ್ಧತಿಯಿದೆ. ವೈಷ್ಣವ ಕ್ಷೇತ್ರಗಳಲ್ಲಿ ಮಾರ್ಗಶೀರ್ಷ ಮಾಸದಲ್ಲಿ ನಡೆಯುವ ರಾಧಾಮಾಧವ ವಿವಾಹ ಉತ್ಸವಗಳಲ್ಲಿ ಅಷ್ಟಪದಿಗಳಿಗೆ ಮುಖ್ಯ ಸ್ಥಾನವಿದೆ. ಕಥಕ್ಕಳಿ, ಕೃಷ್ಣನಾಟಕ, ಸೋಪಾನ ಸಂಗೀತಗಳಿಗೆ ಇದರ ಪ್ರಭಾವ ಬಹಳಷ್ಟಿದೆ. ಮೈಸೂರು ಶೈಲಿಯ ಭರತನಾಟ್ಯಗಳಲ್ಲಿ ಅಷ್ಟಪದಿಗಳ ಅಭಿನಯಕ್ಕೆ ಮೇರು ಪಂಕ್ತಿ.

ಸಂಸ್ಕೃತವನ್ನು ಅರಿಯದವರಿಗೂ ಆದರಣೆಯವಾಗಬಲ್ಲ ಮಾತುಗಳ ಜೋಡಣೆಯ ಮಾಧುರ್ಯ ಇಲ್ಲಿನದು. 'ಭಾಷೆ ಬರದವನೂ ಭಾವಪರವಶನಾಗಬಲ್ಲ' ಎನ್ನುತ್ತಾರೆ ತ. ಸು. ಶಾಮರಾಯರು. ಚಂದ್ರದತ್ತ ಎಂಬವರು ಭಕ್ತಿಮಾಲಾ ಎಂಬ ಸಂಸ್ಕೃತ ಗ್ರಂಥದಲ್ಲಿ ಜಯದೇವನ ಜೀವನ ಚರಿತ್ರೆಯನ್ನು ಬರೆದಿದ್ದಾರೆ.

ಕನ್ನಡದಲ್ಲಿ ಪ್ರೊ। ಎಸ್.ಕೆ.ರಾಮಚಂದ್ರರಾವ್ ಅವರ ಪುಟ್ಟ ಪುಸ್ತಕಗಳನ್ನೂ ಒಳಗೊಂಡಂತೆ ಹಲವು ನೃತ್ಯ–ಸಂಗೀತ ಸಾಹಿತ್ಯ ಸಂಬಂಧಿ ಪುಸ್ತಕಗಳು ನಮ್ಮೆದುರಿಗಿವೆ. ಜೊತೆಗೆ ಸಾಕಷ್ಟು ಅವತರಣಿಕೆಗಳು, ಅನುವಾದಗಳು ಎಲ್ಲ ಭಾಷೆಗಳಲ್ಲೂ ಬಂದಿವೆ. ಬಹುಷಃ ಗೀತಗೋವಿಂದವನ್ನು ಓದದೇ, ಅಭಿನಯಿಸದೇ ಇರುವ ಯಾವ ಶಾಸ್ತ್ರೀಯ ಕಲಾವಿದನೂ ಇರಲು ಸಾಧ್ಯವಿಲ್ಲವೇನೋ ! ಆದರೆ ಇದರ ಭಾವ–ಅಭಿನಯ ಕರಗತ ಮಾಡಿಕೊಳ್ಳಲು ಹಲವಾರು ವರ್ಷಗಳ ಸಾಧನೆ ಅತ್ಯಗತ್ಯ. ಹಾಗಾಗಿ ಕಲೆಯಲ್ಲಿ ಪರಿಪಕ್ವತೆಯನ್ನು ಪಡೆದ ಶುದ್ಧ ಮನಸ್ಸಿನ ಕಲಾವಿದರು ಮಾತ್ರ ಅಷ್ಟಪದಿಗಳಿಗೆ ಜೀವ ತುಂಬಬಲ್ಲರು.

# ಲಲಿತ ಲಹರಿ

**ಶ್ರೀ ದೇವೇಂದ್ರಕುಮಾರ ಹಕಾರಿಯವರ 'ಚಿನ್ಮಯಿ' ಕವನ ಸಂಕಲನದಿಂದಾಯ್ದ ನಟರಾಜನ ನೃತ್ಯ ವಿಶೇಷವನ್ನು ಬಣ್ಣಿಸುವ ಯುಗಳಗೀತೆ 'ಶಂಭೋ ಶಂಕರ'. ನಿಮ್ಮಲ್ಲೂ ಇಂತಹ ಲಹರಿಗಳಿದ್ದರೆ ನಮಗೆ ಬರೆಯಿರಿ.**

*ಶಂಭೋ ಶಂಕರ ಶಿವ ಶಿವ ಶಂಕರ*
*ಶಂಭೋ ಶಂಕರ ಶಿವ ಶಿವ ಶಂಕರ !*

**ನಟ** : ರುದ್ರಭೀಕರ, ಅತಿಗಂಭೀರ;
**ನಟಿ** : ಸೌಮ್ಯ ಸುಂದರಾಕಾರ

**ನಟ** : ಜಗದ ಹುಟ್ಟಿಗೂ ಮೊದಲೆ ಪ್ರಕೃತಿಯೊಡ
ನಾಟ ಹೂಡಿರುವೆ ದೇವ
ದಿವ್ಯ ದೃಷ್ಟಿಯೆ ಸಾಕು ಜೀವರನು
ಕುಣಿಯತೊಡಗಿಸಿದೆ ದೇವ ||೧||

**ನಟಿ** : ಜಡತೆಯಲ್ಲಿ ಚೈತನ್ಯ ತುಂಬಿ, ಜೀ-
ವನದಿ ಚೆಲುವಿನಲೆ ಚೆಲ್ಲಿ
ಅಡವಿಯೆಲ್ಲ ರಸ ಹಸುರಿನಲ್ಲಿ ಸಿರಿ
ಸೊಬಗ ಸುರಿಸಲಿಹವಲ್ಲಿ ||೨||

**ನಟ** : ಜೀವಕಳೆಯಿಲ್ಲದಲೆ ಬತ್ತಿಹೋಗಿಹ ಜೀವ
ಕೊಳವಂದು ತುಂಬಿತ್ತು ನೋಡು
ಚೈತನ್ಯರಸದಲ್ಲಿ ಮಿಂದು, ಹುಲುಕಡ್ಡಿಗಳು
ಹಾಡಿದವು ಜೀವಿಗಳು ಹೊಸತು ಹಾಡು ||೩||

**ನಟಿ** : ಜೀವನದ ವಿಧವಿಧದ ಭಂಗಿಯಲಿ ಜೀವಿಗಳ
ಕುಣಿಸುತಿಹೆ ಓ ಮಹಾ ನಾಟ್ಯಾಕಾರ...
ಚಿತ್ರಭಿತ್ತಿಯ ಮೇಲೆ ಭಾವ ಕುಂಚವ ಹಿಡಿದು
ನಗೆಹೊಗೆಯ ಸುಳಿ ಚಿತ್ರಿಸುವೆ, ಚಿತ್ರಕಾರ ||೪||

**ನಟ** : ರಚಿಸುತಿಹೆ, ಕೆಡಿಸುತಿಹೆ; ಕೂಡಿಸುವೆ,ಅಗಲಿಸುವೆ
ನೀನೊಬ್ಬ ಭುವಿಯ ಹಿರಿಯಾಟಗಾರ
ನಿಮಿಷವೊಂದರಲಳಿಸಿ, ಮರುನಿಮಿಷದಲಿ ನಗಿಸಿ
ಮತ್ತೆ ನಿಶ್ಶಬ್ದತೆಯು ಮಂತ್ರಗಾರ ||೫||

**ನಟಿ** : ನೀನಂದು ಕಣ್ ಬಿಟ್ಟು ಬಳಿಕ ಮರೆಯಾದೆಯೈ
ಎಲ್ಲಿಯಡಗಿದೆ ದಿವ್ಯ ಪುರುಷ ?





## ಶಂಭೋ ಶಂಕರ

ಪ್ರಕೃತಿಯೊಡಲಲಿ ತಮವು ಸುತ್ತಿ ನರ್ತಿಸುತಿಹುದು
ನೀಬೇಗ ಬಾ ನವ್ಯ ಪುರುಷ ||೬||

**ನಟ** : ಸತ್ವವಡಗಿತೇ ರಜವು ಉಡುಗಿತೇ
ಹೋಯಿತೇನು ಬೆಳಕೆಲ್ಲ ?
ಚೆಲುವು ಬೆಳಕು, ಐಕ್ಯತೆಯು, ಬಾಳಿನಲಿ
ಬೇರೆ ಬೇರೆ ಬೇಕಿಲ್ಲ ||೭||

**ನಟ** : ಯಾವ ತಾಯಿಯ ಕೊರಲ ಮಾಂಗಲ್ಯ ಹರಿಯಿತ್ತೈ
ಏನು ರೋದನೆ ನಮ್ಮ ಹೃದಯದಲ್ಲಿ !
ಮೆಟ್ಟು ಕೆಟ್ಟುದನು, ನೀ ಕಟ್ಟುವಾ ಶಿವಪೂರ್ಣ
ಭಾವಮಾಂಗಲ್ಯವನು ಬದುಕಿನಲ್ಲಿ ||೮||

**ನಟ** : ಬರಲಿ ಬೆಂಕಿ ಹಣೆಗಣ್ಣನೊಡೆದು
ಓ ರುದ್ರ ! ಭೀಕರಾಕಾರ
ಸುಡುವುದೆಲ್ಲಮಂ ಸುಟ್ಟುಬಿಟ್ಟು ಶುಭ
ಸತ್ಯಬೀರು ಸಾಕಾರ ||೯||

ಕುಣಿಕುಣಿದು ಬಾ ನಿನ್ನ ಪ್ರಲಯತಾಂಡವ ರಚಿಸಿ
ದಿಕ್ತಟಕು ಬಿತ್ತರಿಸು ಶಂಭೋ
ಒಳಿತೊಂದನೇ ಉಳಿಸಿ, ಅಶಿವನೆಲ್ಲವ ನುಂಗಿ
ಬಾನು ಭುವಿಯಂತರವ ತುಂಬೋ ||೧೦||

**ನಟಿ** : ರವಿಕಿರಣಗಳ ಬೆಳಕು, ಬರಿ, ಜಗವಸುತ್ತದೆಯೆ
ನಮ್ಮುಸಿರಿನೊಳಗಿಳಿದು ಬರಲಿ
ಶಿವ ಬೆಳಕು ಬರಲೆದೆಯು ಬೆಳಗಿ ತೊಳಗಲು ದಿವ್ಯ
ಶೂನ್ಯ ನೆಲಸಿರೆ ಸಚ್ಚಿದಾನಂದ ತರಲಿ ||೧೧||





**ನೂ**ಪುರ ಭ್ರಮರಿಯ ಸಂಚಿಕೆಗಳು ನನಗೆ ತುಂಬಾ ಇಷ್ಟ. ಕೆಲವು ಸಂಚಿಕೆಗಳು ನಿಯಮಿತವಾಗಿ ದೊರೆತಿಲ್ಲ. ಐ ಮಿಸ್ ಇಟ್ ! ಕಳುಹಿಸಿಕೊಡುವಿರಾ ?

**– ಆರ್.ವಾಸುದೇವ್, 'ಗುರುಗುಹ ನಾಟ್ಯಗಾನ ನಿಲಯಂ', ಬೆಂಗಳೂರು.**

(ಯಾವ ಸಂಚಿಕೆಗಳು ಕೈತಪ್ಪಿ ಹೋಗಿವೆ ಎಂದು ತಿಳಿಸಿ. ಕಳಿಸಿಕೊಡುವ ವ್ಯವಸ್ಥೆ ಮಾಡುತ್ತೇವೆ. ಪ್ರತೀ ಸಂಚಿಕೆಗೂ ಓದುಗರು ಪ್ರತ್ಯುತ್ತರಿಸಿದಲ್ಲಿ ಸಂಚಿಕೆಗಳು ತಲುಪುತ್ತವೆಯೋ, ಇಲ್ಲವೋ ಎಂಬುದು ನಮಗೆ ಖಾತ್ರಿಯಾಗುತ್ತದೆ ಮತ್ತು ತಲುಪಿಸುವಲ್ಲಿ ಅನುಕೂಲವಾಗುತ್ತದೆ. ಹಾಗಾಗಿ ನಿಮ್ಮ ಸದಸ್ಯತ್ವವನ್ನು ಖಾತ್ರಿ ಮಾಡಿಕೊಳ್ಳಿ. **– ನೂಪುರ ಬಳಗ)**

✱✱

**ನೂ**ಪುರ ಭ್ರಮರಿ ತುಂಬಾ ಚೆನ್ನಾಗಿದೆ. ... ಮಡಿಕೇರಿಯಂತಹ ಪುಟ್ಟ ನಗರದಲ್ಲಿದ್ದರೂ, ಹಿರಿಯ ಪ್ರಯತ್ನ ಮಾಡುತ್ತಿರುವ ನಿಮಗೆ ಅಭಿನಂದನೆಗಳು. ವೆಬ್ ಸೈಟ್ ಚೆನ್ನಾಗಿ ಬಂದಿದೆ. ಸಿಂಪ್ಲಿ ಗುಡ್. ಗುಡ್‌ಲಕ್.




**–ಪೂರ್ಣಾ ಸುರೇಶ್, 'ಅಕಾಡೆಮಿ ಆಫ್ ಇಂಡಿಯನ್ ಪರ್‌ಫಾರ್ಮಿಂಗ್ ಆರ್ಟ್ಸ್', ಬೆಂಗಳೂರು.**

**–ನಯನಾ, ಬೆಂಗಳೂರು.**

**– ದೀಪಾ ಶಿವಮೊಗ್ಗ, ಮೈಸೂರು.**

**–ಸ್ಟೀವನ್ ರೇಗೋ, ವರದಿಗಾರರು, ಮಂಗಳೂರು.**

✱✱

**ವೆ**ಬ್‌ಸೈಟ್ ಸುಂದರವಾಗಿ ಮೂಡಿಬಂದಿದೆ. ಆದರೆ ಓದುವಾಗ ಕೆಲವೊಂದು ಪುಟಗಳಲ್ಲಿ ಸಮಸ್ಯೆಗಳು ಕಂಡುಬರುತ್ತವೆ. ಏನೇ ಇರಲಿ, ನಿಜಕ್ಕೂ ಪ್ರಶಂಸನೀಯ ಪ್ರಯತ್ನ. ಹೆಮ್ಮೆಯೆನಿಸುತ್ತದೆ. ಇಂತಹ ಕಾರ್ಯ ಕಷ್ಟಕರ, ಸವಾಲಿನ ವಿಷಯ ಎಂಬುದು ನನಗೆ ಗೊತ್ತಿದೆ. ಕೀಪ್ ಇಟ್ ಅಪ್. ಶುಭಾಕಾಂಕ್ಷೆಗಳು.

**–ಮುರಳಿ ಎನ್., ಎಕ್ಸಿಕ್ಯೂಟಿವ್, ಆ್ಯಕ್ಸಿಸ್ ಬ್ಯಾಂಕ್, ರಾಯಚೂರು.**

(ವೆಬ್ ಸೈಟ್ ನ್ನು ಯೂನಿಕೋಡ್‌ಗೆ ಬದಲಾಯಿಸುವ ಕಾರ್ಯ ಚಾಲ್ತಿಯಲ್ಲಿದೆ. ಶೀಘ್ರವೇ ಸುಧಾರಿಸಲಿದೆ.**– ನೂಪುರ ಬಳಗ)**







**ಅ**ಭಿನಂದನೆಗಳು. ಬದುಕಿಗಿಷ್ಟು ಬಣ್ಣ ತುಂಬುವ ಇಂತಹ ಪ್ರಯತ್ನ ಮಾಡಹೊರಟಿರುವ ನಿಮ್ಮೆಲ್ಲರ ಈ ಸೃಜನಶೀಲತೆಗೆ ಶುಭಾಕಾಂಕ್ಷೆಗಳು. ಮಡಿಕೇರಿಯ ಸುಂದರ ಪ್ರಕೃತಿಯ ಹಿನ್ನಲೆಯಲ್ಲಿ ಪುಸ್ತಕದ ಗೀಳಿನ, ಚೆಂದದ ನಾಟ್ಯದ ಒಲವಿನ ಭಾಷ್ಯ ಬರೆಯಹೊರಟಿರುವ ನಿಮ್ಮ ಈ ದಿನಗಳಿಗೆ ಒಡಲಾಳದ ಹಾರೈಕೆ ನನ್ನಿಂದ...

ಸಂಪಾದಕೀಯ ಸುಂದರವಾಗಿದೆ, ಆಪ್ತವಾಗಿದೆ ಮುಖ್ಯವಾಗಿ ಸಂಭ್ರಮದ ಸುಂದರ ಘಳಿಗೆಗಳನ್ನು ಅಕ್ಷರರೂಪಕ್ಕಿಳಿಸುವಲ್ಲಿ ಗೆದ್ದಿದೆ. ಮಿಸ್ ಮಾಡ್ಕೊಂಡೆ ಅನ್ನೋ ಸಂಜೆ...!!!!!

ಕಣವಿಯವರ ಕವನ ಈ ಬಾರಿಯ ಹೈಲೈಟ್ ಅನ್ನಿಸ್ತು. ಋತುರಾಜ ಆಗಮನಕ್ಕೆ ಭ್ರಮರಿ ಬಳಗದಿಂದ ಒಳ್ಳೆಯ ಆಲಿಂಗನ.

ಚೆಂದಾಗಿ ಬರೆಯಿರಿ. ಶಿಸ್ತಾಗಿ ದುಡಿಯಿರಿ. ಅಂದವಾಗಿ ನಗುನಗುತ್ತಾ ಇರಿ. ಒಲವಿರಲಿ.

**– ಕಪಿಲಾ ಶ್ರೀಧರ್, ಬರಹಗಾರರು, ಬೆಂಗಳೂರು.**




✱✱

**ಪ**ತ್ರಿಕೆ ತುಂಬಾ ಇಷ್ಟ ಆಗಿದೆ. ಮುಂದಿನ ದಿನಗಳಲ್ಲಿ ಹೊಸ ಆಯಾಮ ಪಡೆಯುವುದು ಖಂಡಿತ. ಹೃದಯಪೂರ್ವಕ ವಂದನೆಗಳು.

**–ಶಶಿಧರ್, ದಾವಣಗೆರೆ**

✱✱

. **ಪ**ತ್ರಿಕೆಯ ವಿಷಯ ವೈವಿಧ್ಯತೆಗಳು ಸಾಮಾನ್ಯ ಓದುಗನಿಗೆ ಕಷ್ಟವೆನಿಸುವುದಿದೆ ಮತ್ತು ಇದನ್ನು ಸುಖಾಸುಮ್ಮನೆ ಸಾಮಾನ್ಯ ಭಾವದಲ್ಲೂ ಓದಲು ಸಾಧ್ಯವಿಲ್ಲ. ಓದಲು ಯೋಗ್ಯವಾದ, ಅರ್ಹವಾದ ಪತ್ರಿಕೆ.

**– ಕಿಗ್ಗಾಲು ಗಿರೀಶ್, ಕೊಡಗು.**

✱✱

**ಅ**ಭಿನಂದನೆಗಳು. ನಿಜಕ್ಕೂ ಇದು ಒಳ್ಳೆಯ ಸಂಗತಿ, ಒಳ್ಳೆಯ ಕೆಲಸ, ಒಳ್ಳೆಯ ಯೋಚನೆ. ಯಶಸ್ಸು ಸಿಗಲಿ. ಆಲ್ ದ ಬೆಸ್ಟ್.

**– ಶ್ರೀಲೇಖಾ ಹೆಗ್ಡೆ, ಬೆಂಗಳೂರು.**



**ಇಂ**ತಹ ಒಳ್ಳೆಯ ಪತ್ರಿಕೆಗೆ ಧನ್ಯವಾದ ಸಲ್ಲಲೇಬೇಕು. ಕಲೆಯ ಕುರಿತಾದ ನಿಮ್ಮ ಆಸಕ್ತಿ ಅಭಿನಂದನೀಯ. ಭವಿಷ್ಯದಲ್ಲೂ ಈ ಆಸಕ್ತಿ ಬೆಳೆಯಲಿ ಮತ್ತು ಮತ್ತಷ್ಟು ಜನರನ್ನು ಬೆಳೆಸಲಿ. ನಾವೆಲ್ಲರೂ ಜೊತೆಗಿದ್ದೇವೆ.

**–ಸಾಯಿ ವೆಂಕಟೇಶ್, ಉಪಾಧ್ಯಕ್ಷರು, ಕರ್ನಾಟಕ ನೃತ್ಯ ಕಲಾಪರಿಷತ್ (ಕಾರ್ಯದರ್ಶಿ, ವರ್ಲ್ಡ್ ಡ್ಯಾನ್ಸ್ ಅಲೆಯನ್ಸ್–ಕರ್ನಾಟಕ ಛಾಪ್ಟರ್) ಬೆಂಗಳೂರು.**

✲✲

**ನಿ**ಮ್ಮ ಪ್ರಯತ್ನ ಪ್ರಶಂಸನೀಯ. ನೂಪುರ ಭ್ರಮರಿಯ ಗುಂಜಾರವ ಪಸರಿಸಲಿ ನಿರಂತರ.

**–ಶ್ರೀಕಾಂತ್ ಹೆಗಡೆ, ಸಂಪಾದಕರು, ಹವ್ಯಕ ಮಾಸಿಕ, ಬೆಂಗಳೂರು.**

✲✲

**ಉ**ತ್ತಮ ಪತ್ರಿಕೆ. ಒಳ್ಳೆಯ ಮಾಹಿತಿಗಳನ್ನು ಹೊಂದಿದೆ.

**-ಗಾಯತ್ರೀ ರಾಘವೇಂದ್ರ, ಬೆಟ್ಟಕೊಪ್ಪ.**

✲✲

**ವೆ**ಬ್ ಸೈಟ್ ಸುಂದರವಾಗಿ ಮೂಡಿಬಂದಿದೆ. ಪ್ರಶಂಸನೀಯ. ಒಳ್ಳೆಯ ಪ್ರಯತ್ನ. ತುಂಬಾ ಇಷ್ಟವಾಯಿತು. ಪ್ರಥಮ ಸಂಚಿಕೆಯ ಅರಂಗೇಟ್ರಂ ಬರಹವಂತೂ ಎಂದೆಂದಿಗೂ ಪ್ರಸ್ತುತ. ಶುಭವಾಗಲಿ.

**–ಅಕ್ಷತಾ ಸಂತೋಷ್, ಮಂಗಳೂರು.**

✲✲

## ಅಂಗಳದ ಮಾತು ತಿಂಗಳ ಚರ್ಚೆ

**ಇಂ**ದಿನ ಸ್ಥಿತಿಯಲ್ಲಿ ನರ್ತನಕಲೆಯಲ್ಲಿ ಆಂಗಿಕಾಭಿನಯ (ಅಂಗಗಳ ಚಲನೆಯಿಂದಾಗುವ ಅಭಿನಯ) ಮತ್ತು ಆಹಾರ್ಯಾಭಿನಯ (ವೇಷಭೂಷ,ಅಲಂಕಾರ) ಮುಖ್ಯವೆನಿಸಿಕೊಂಡಿದೆ. ಅಬ್ಬರದ, ತಾಳ–ಲಯಗಳಿಲ್ಲದ, ಸಂಗೀತವೇ ವಾಚಿಕಾಭಿನಯ ಎನಿಸಿಕೊಳ್ಳುತ್ತಿದೆ. ಸಾತ್ವಿಕಾಭಿನಯ ಮರೆಯಾಗುತ್ತಿದೆ. ಇಂತಹ ಸ್ಥಿತಿಯನ್ನು ನಾವೇನೆಂದು ಕರೆಯೋಣ? ಭರತನಾಟ್ಯವೆಂಬುದು ಬರಿಯ ಚಲನೆ ಮತ್ತು ಆಹಾರ್ಯಗಳಿಂದ ಒಡಗೂಡಿದ ನೃತ್ಯವೇ? ಇದಕ್ಕೆ ಅಂಟಿದ ಹಾಸ್ಯಾಸ್ಪದ ದೃಷ್ಟಿ ಬದಲಾಗುವುದೆಂತು ?

ನಿಮ್ಮ ಅಂಗಳದ ಮಾತುಗಳಿಗೆ ಪ್ರತೀ ಸಂಚಿಕೆ ಚರ್ಚೆಯನ್ನು ಒದಗಿಸುತ್ತದೆ. ಅಭಿಪ್ರಾಯ, ಅನಿಸಿಕೆಗಳಿಗೆ ಸ್ವಾಗತ. ಈ ಹಿಂದಿನ ಸಂಚಿಕೆಗಳ ವಿಭಿನ್ನ ವಿಷಯಗಳ ಕುರಿತೂ ಅನಿಸಿಕೆಗಳನ್ನು ಕಳಿಸಬಹುದು.







## ಕಲಾಪೋಷಕರಿಗೆ ನೂಪುರ ಭ್ರಮರಿಯಿಂದ ಹೃದಯಪೂರ್ವಕ ನಮನ

**ಈ ಸಂಚಿಕೆಯ ಪ್ರಾಯೋಜಕರಾಗಿ ಪ್ರೋತ್ಸಾಹಿಸಿದವರು**

### ಶ್ರೀ ಬೋಳ ಕಮಲಾಕ್ಷ ಕಾಮತ್
### ಮತ್ತು
### ಶ್ರೀಮತಿ ಸುಗುಣ ಕಮಲಾಕ್ಷ ಕಾಮತ್

**ಎ೨೦೧, ೨೦೨. ಸದ್ಗುರು ಛಾಯಾ, ಸುಧೀಂದ್ರ ನಗರದ ಹತ್ತಿರ, ದಹಿಸರ, ಮುಂಬೈ.**



...**ಎ**ದೆ ಎದೆಗೂ ನಡುವಿದೆ ಹಿರಿಗಡಲು
ಮುಟ್ಟಲಾರೆವೇನೋ..ಸೇತುವೆ ಕಟ್ಟಲಾರೆವೇನೋ...?
**ಪ್ರೀತಿಯಿರಲಿ,..ನಮ್ಮ ನಿಮ್ಮ ನಡುವೆ...**

✲✲

**(೧ನೇ ಪುಟದಿಂದ)**

–ಇಲ್ಲಿ ಕತ್ತರಿಸಿ–

ಹೆಸರು :

ವಿಳಾಸ :

ಅಭಿಪ್ರಾಯ :